| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬೇಕಾಗುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬೇಕಾಗುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬೇಕಾಗುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| 1ನೇ ಅವಧಿ | 10ನಿ | ಕನ್ನಡ – ಒಗ್ಗಟ್ಟಲ್ಲಿ ಬಲ | ಕೇಳಲಾದ ಕಥೆಯಲ್ಲಿನ ಚಿಕ್ಕ ಮಾಹಿತಿಯನ್ನು ನೆನಪಿಸಿಕೊಳ್ಳುವರು. | ಕಥೆ ಪುಸ್ತಕ | ಶಿಕ್ಷಕರು | **ಪೂ.ಸಿ.ಚ.**<br>ಜಾಣ ಮೊಲ ಕಥೆ ಹೇಳುವರು. | ಕನ್ನಡ – ನಾಯಿ ಬಾಲ ಡೊಂಕು | ಪ್ರಾಸಗಳು, ಪದಗಳು, ಹಾಡುಗಳು, ಸರಳ ಕಥೆಗಳನ್ನು ಓದುವರು. | ಪದಗಳ ಕಾರ್ಡ್‌ಗಳು | ಶಿಕ್ಷಕರು | **ಪೂ.ಸಿ.ಚ.**<br>ಮಕ್ಕಳು 1 ನೇ ತರಗತಿಯವರೊಂದಿಗೆ ಕಥೆ ಹೇಳುವರು. | | | | | |
| | 30ನಿ | | | | ಶಿಕ್ಷಕರು | ಈಗ ಆಲಿಸಿದ "ಜಾಣ ಮೊಲ" ಮತ್ತು ಇನ್ನಿತರ ಕಥೆಗಳನ್ನು ಮಕ್ಕಳಿಂದ ಹೇಳಿಸುವರು.<br>ಆ ಕಥೆಗಳಿಗೆ ಸಂಬಂಧಪಟ್ಟಂತೆ ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಹಾಕಿ ಉತ್ತರ ಪಡೆಯುವರು. | | | | ವಿದ್ಯಾರ್ಥಿ | **"ನಾಯಿಮರಿ ನಾಯಿಮರಿ ತಿಂಡಿಬೇಕೆ ?"** ಹಾಡಿರುವ ಕಾರ್ಡ್‌ನ್ನು ಎಲ್ಲಾ ಮಕ್ಕಳಿಂದ ಓದಿಸುವರು.<br>ಪ್ರಾಸಪದಗಳ ಪಟ್ಟಿಯನ್ನು ಓದಿಸುವರು | | | | | **– 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. –** |
| | 10ನಿ | | | ಕಥಾ ಪಟ್ಟಿಗೆ,ಅಭ್ಯಾಸ ಗೀಚು | ಶಿಕ್ಷಕರು | ಮಕ್ಕಳಿಗೆ ಮುಂದಿನ ಚಟುವಟಿಕೆಯ ಬಗ್ಗೆ ಸೂಚನೆಗಳನ್ನು ನೀಡುವರು. | ಕನ್ನಡ – ಒತ್ತು ಮತ್ತು ಜೋಡಣೆ | ಪ್ರಾಣಿಯಲ್ಲಿನ ಎಲ್ಲಾ ಸ್ವರಗಳನ್ನು ಉಚ್ಚರಿಸುವರು. ಸಂಯುಕ್ತಾಕ್ಷರ ಪದಗಳನ್ನು ಮತ್ತು ಒತ್ತಕ್ಷರಗಳನ್ನು ಬರೆಯುವರು. | ಒತ್ತಕ್ಷರಗಳ ಚಾರ್ಟ್, ಅಭ್ಯಾಸ ಗೀಚು | ಶಿಕ್ಷಕರು | ಮಕ್ಕಳ ಚಟುವಟಿಕೆಗಳನ್ನು ಪರಿಶೀಲಿಸುವರು. | | | | | |
| | 30ನಿ | | | | ವಿದ್ಯಾರ್ಥಿ | ಕಥೆಯ ಚಿತ್ರ ಸರಣಿಗಳನ್ನು ಕಥಾ ಪಟ್ಟಿಗೆ ಅಥವಾ 'ಚಿತ್ರಗಳ ಆಲ್ಬಂ' ಗಳ ಮೂಲಕ ಮಕ್ಕಳು ವೀಕ್ಷಿಸುವರು. ಅವುಗಳಿಗೆ ಕಥೆ ಕಟ್ಟುವರು. | | | | ಶಿಕ್ಷಕರು | ಒತ್ತಕ್ಷರಗಳ ಚಾರ್ಟ್‌ನ್ನು ಪ್ರದರ್ಶಿಸುವರು.<br>ಒತ್ತಕ್ಷರಗಳ 3 ಗುಂಪುಗಳನ್ನು ವಿಭಾಗಿಸಿ ಪರಿಚಯಿಸುವರು.<br>1. ಕ್ಕ ಗ್ಗ ಚ್ಚ ಡ್ಡ<br>2. ಖ್ಖ ಜ್ಜ ಣ್ಣ ಟ್ಟ<br>3. ನ್ನ ಮ್ಮ ತ್ತ ರ್ರ ಲ್ಲ ಯ್ಯ<br>ಉಚ್ಚಾರಣೆ ಮತ್ತು ಬರೆಯುವ ಕ್ರಮಗಳನ್ನು ಅಭ್ಯಾಸ ಮಾಡಿಸುವರು. | | | | | **– 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. –** |
| 2ನೇ ಅವಧಿ | 10ನಿ | ಗಣಿತ – ಸಂಖ್ಯೆಗಳು | 1 ರಿಂದ 9 ರವರೆಗಿನ ಸಂಖ್ಯೆಗಳನ್ನು ಬಳಸಿ ಏರಿಕೆ – ಇಳಿಕೆ ಕ್ರಮಗಳನ್ನು ಬರೆಯುವರು. | ರಟ್ಟಿನ ಪಟ್ಟಿಗಳು | ಶಿಕ್ಷಕರು | 2 ನೇ ತರಗತಿಯವರೊಂದಿಗೆ ದನಿ ಗೂಡಿಸುವರು.<br>ಶಿಕ್ಷಕರು ಚಟುವಟಿಕೆಗೆ ಸೂಚನೆ ನೀಡುವರು. | ಗಣಿತ – ಸಂಖ್ಯೆಗಳು | 1–99 ರವರೆಗಿನ ಸಂಖ್ಯೆಗಳನ್ನು ಅಕ್ಷರಗಳಲ್ಲಿ ಬರೆಯುವರು. | ಗುಂಪು ಚಟುವಟಿಕೆ, ಕಾಗದ | ಶಿಕ್ಷಕರು | **ಪೂ. ಸಿ. ಚ.:**<br>ಹನ್ನೊಂದು ಜನ ಬುದ್ಧಿವಂತರ ಕಥೆ ಹೇಳುವರು. | | | | | |
| | 30ನಿ | | | | ವಿದ್ಯಾರ್ಥಿ | ಶಿಕ್ಷಕರು ಮಕ್ಕಳನ್ನು ಗುಂಪುಗಳಲ್ಲಿ ಕೂಡಿಸಿ ಚಟುವಟಿಕೆ ನೀಡುವರು.<br>ಮಕ್ಕಳಿಗೆ ರಟ್ಟಿನ ಪಟ್ಟಿಗಳನ್ನು ಕೊಟ್ಟು ಅವುಗಳನ್ನು ಏರಿಕೆ ಮತ್ತು ಇಳಿಕೆ ಕ್ರಮಗಳಲ್ಲಿ ಅನುಕ್ರಮವಾಗಿ ಜೋಡಿಸಲು ಸೂಚಿಸುವರು.<br>ಉದಾ:–<br> | | | | ಶಿಕ್ಷಕರು | ಮಕ್ಕಳನ್ನು ಗುಂಪುಗಳಲ್ಲಿ ಕೂಡಿಸುವರು. ನಂತರ 11 ರಿಂದ 20 ರವರೆಗೆ ಒಬ್ಬೊಬ್ಬರಿಂದ ಒಂದೊಂದು ಸಂಖ್ಯೆಯನ್ನು ವೈಯಕ್ತಿಕವಾಗಿ ಕ.ಹ.ಯ. ಮೇಲೆ ಅಕ್ಷರಗಳಲ್ಲಿ ಬರೆಸುವರು.<br>ಇದೇ ರೀತಿ 21 ರಿಂದ 99 ರವರೆಗೆ ಮುಂದುವರೆಸುವರು. | | | | | **– 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. –** |
| | 10ನಿ | | | ಏರಿಕೆ ಇಳಿಕೆ ಮೆಟ್ಟಿಲು, ಸಂಖ್ಯೆಗಳ ಮಿಂಚುಪಟ್ಟಿಗಳು | ಶಿಕ್ಷಕರು | – | ಲಲಿತ ಕಲೆ | ಬೆಂಕಿಕಡ್ಡಿಗಳಿಂದ ಚಿತ್ರಗಳ ರಚನೆ. | ಬೆಂಕಿ ಕಡ್ಡಿಗಳು, ಗಮ್ ಇತ್ಯಾದಿ | ಶಿಕ್ಷಕರು | ಮಕ್ಕಳಿಗೆ ಬೆಂಕಿ ಕಡ್ಡಿಗಳಿಂದ ಚಿತ್ರರಚನೆಯ ಮಾಡುವುದನ್ನು ಹೇಳಿಕೊಡುವರು. | | | | | |
| | 30ನಿ | | | | ಶಿಕ್ಷಕರು | ಅಂಕಿಗಳ ಮಿಂಚು ಪಟ್ಟಿಗಳನ್ನು ಬಳಸಿಕೊಂಡು ದೊಡ್ಡದು – ಚಿಕ್ಕದು ಗುರ್ತಿಸಿ, ಏರಿಕೆ ಇಳಿಕೆ ಮೆಟ್ಟಿಲುಗಳ ಮೇಲೆ ಮೊದಲು ಏರಿಕೆ ಮತ್ತು ಇಳಿಕೆ ಕ್ರಮಗಳಲ್ಲಿ ಜೋಡಿಸುವುದನ್ನು ತೋರಿಸುವರು. ನಂತರ ಮಕ್ಕಳಿಂದ ಮಿಂಚುಪಟ್ಟಿಗಳ ಸಹಾಯದಿಂದ ಚಟುವಟಿಕೆ ಮಾಡಿಸುವರು.<br>ಉದಾ :– 4, 6, 5, 3<br> | | | | ವಿದ್ಯಾರ್ಥಿ | ಹೀಗೆ ಹಲವಾರು ಚಿತ್ರ ರಚನೆಯನ್ನು ಮಕ್ಕಳಿಂದ ಮಾಡಿಸುವರು. | | | | | **– 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. –** |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬೋಧನೋಪಕರಣ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬೋಧನೋಪಕರಣ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬೋಧನೋಪಕರಣ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| 3ನೇ ಅವಧಿ | 10ನಿ | ಮೌಲ್ಯ ಶಿಕ್ಷಣ | ಮೌಲ್ಯಗಳ ಬೆಳವಣಿಗೆ | ಕಥೆ | ಶಿಕ್ಷಕರು | **ಪೂ.ಸಿ.ಚ.**<br>ಮಕ್ಕಳಿಗೆ "ಶಿಬಿ ಮತ್ತು ಪಾರಿವಾಳ" ಕಥೆ ಹೇಳುವರು. | ಮೌ.ಶಿ, s.u.p.w. | ಮೌಲ್ಯಗಳ ಬೆಳವಣಿಗೆ | ನಾಟಕ | ಶಿಕ್ಷಕರು | **ಪೂ.ಸಿ.ಚ.**<br>ಮಕ್ಕಳಿಗೆ 'ಶಿಬಿ ಮತ್ತು ಪಾರಿವಾಳ" ಕಥೆ ಹೇಳುವರು. | ಕನ್ನಡ - ಗದ್ಯಪಾಠ ೭ : ಜಲಪಾತ | ಅಭಿನಯ ಸನ್ನಿವೇಶಗಳನ್ನು ಸಂಭಾಷಣೆ ಸಂದರ್ಭ, ಚಿತ್ರಗಳ ಮೂಲಕ ಅರ್ಥ ಮಾಡಿಕೊಳ್ಳುವರು. | ನಾಟಕ | ಶಿಕ್ಷಕರು | **ಪೂ.ಸಿ.ಚ.**<br>ಮಕ್ಕಳನ್ನು "ಶಿಬಿ ಮತ್ತು ಪಾರಿವಾಳ" ಎಂಬ ನಾಟಕವನ್ನು ಅಭಿನಯಿಸಲು ಅಣಿಗೊಳಿಸುವರು.<br>ಶಿಬಿ ಚಕ್ರವರ್ತಿ, ಪಾರಿವಾಳ ಮತ್ತು ಗಿಡುಗಗಳ ಪಾತ್ರಗಳನ್ನು ಮಕ್ಕಳಿಗೆ ಕೊಟ್ಟು ಸಂಭಾಷಣೆಗಳನ್ನು ಹೇಳಿಸುವರು. |
| | 30ನಿ | | | | ಶಿಕ್ಷಕರು | ಮಕ್ಕಳಿಗೆ ಈ ಕಥೆಯ ನೀತಿ ತಿಳಿಸುವರು.<br>ನ್ಯಾಯ, ಧರ್ಮ, ದಾನ ಮೌಲ್ಯಗಳ ಬಗ್ಗೆ ತಿಳಿಯುವರು | | | | ಶಿಕ್ಷಕರು | ಮಕ್ಕಳಿಗೆ ಈ ಕಥೆಯ ನೀತಿ ತಿಳಿಸುವರು.<br>(ನ್ಯಾಯ, ಧರ್ಮ, ಧನ ಮೌಲ್ಯಗಳ ಬಗ್ಗೆ ತಿಳಿಯುವರು) | | | | ಹಿರೇಮಣಿ | (ಪೂರ್ವಭಾವಿಯಾಗಿ ಅಭ್ಯಾಸ ಮಾಡಿರುತ್ತಾರೆ)<br>ಸಂಭಾಷಣೆಗಳ ಮೂಲಕ ಕಥೆಯ ನೀತಿಯನ್ನೂ ಘಟನೆಗಳನ್ನೂ ಮಕ್ಕಳು ಅರ್ಥೈಸಿಕೊಳ್ಳುವರು.<br>ಶಿಕ್ಷಕರು ಮಕ್ಕಳ ಚಟುವಟಿಕೆಗೆ ಮೆಚ್ಚುಗೆ ಸೂಚಿಸುವರು. |
| | 10ನಿ | ಕನ್ನಡ - ಒಗ್ಗಟ್ಟಿನಲ್ಲಿ ಬಲ | ಹೇಳಲಾದ ಚಿಕ್ಕ ಕಥೆಯಲ್ಲಿನ ಮಾಹಿತಿಯನ್ನು ನೆನಪಿಸಿಕೊಳ್ಳುವರು. | ಪ್ರಶ್ನಾವಳಿ ಕಾರ್ಡ್ | ಶಿಕ್ಷಕರು | ಮುಂದಿನ ಚಟುವಟಿಕೆಯ ಬಗ್ಗೆ ಸೂಚನೆಗಳನ್ನು ನೀಡುವರು. | ಸಾ.ಉ.ಉ.ಕಾ. | - | ನಿಂಬೆಹಣ್ಣು ಸಕ್ಕರೆ ಯಾಲಕ್ಕಿಪುಡಿ ನೀರು, | ಶಿಕ್ಷಕರು | ಮಕ್ಕಳಿಗೆ ನಿರ್ವಹಿಸಬೇಕಾದ ಚಟುವಟಿಕೆಗಳ ಬಗ್ಗೆ ಸೂಚನೆ ನೀಡುವರು. | | ಸನ್ನಿವೇಶ ಮತ್ತು ಘಟನೆಗಳನ್ನು ವಿವರಿಸುವರು, ಲೇಖನ ಚಿತ್ರಗಳನ್ನು ಮಾಹಿತಿಗಳಲ್ಲಿ ಬಳಸುವರು. | ಪಠ್ಯ ಪುಸ್ತಕ, ಜಲಪಾತದ ಚಿತ್ರಗಳು | ಶಿಕ್ಷಕರು | ಜೋಗ ಜಲಪಾತದ ಸೌಂದರ್ಯ-ಉಪಯೋಗ ಮಹತ್ವಗಳ ಬಗ್ಗೆ ವಿವರಣೆ ನೀಡುವರು. |
| | 30ನಿ | | | | ಹಿರೇಮಣಿ | ಚಿಕ್ಕ ಚಿಕ್ಕ ಪ್ರಾಸಗೀತೆಗಳನ್ನು ಹಾಡಿಕೊಂಡು ಅಭ್ಯಾಸ ಮಾಡುವರು.<br>ಹಿಂದಿನ ಅವಧಿಯಲ್ಲಿ ಆಲಿಸಿದ 'ಒಗ್ಗಟ್ಟಿನಲ್ಲಿ ಬಲ" ಕಥೆಗೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಹಿರೇಮಣಿಯು ಕೇಳುವನು.<br>ಉದಾ :- ರಾಮಯ್ಯನಿಗೆ ಎಷ್ಟು ಜನ ಮಕ್ಕಳು ?<br>ಅವರು ಯಾವಾಗಲೂ ಏನು ಮಾಡುತ್ತಿದ್ದರು ?<br>ಮಕ್ಕಳು ಉತ್ತರ ಹೇಳುವರು. | | | | ಶಿಕ್ಷಕರು | (2 ನೇ ತರಗತಿಯ ಮಕ್ಕಳಿಗೆ ನಿಂಬೆಹಣ್ಣಿನ ಪಾನಕವನ್ನು ತಯಾರಿಸುವುದನ್ನು ಮಕ್ಕಳಿಗೆ ಹೇಳಿಕೊಡುವರು.) | | | | ಶಿಕ್ಷಕರು | "ಜಲಪಾತ" ಪಠ್ಯಭಾಗದಲ್ಲಿರುವ ಜೋಗ ಜಲಪಾತದ ಬಗ್ಗೆ ವಿವರಿಸುವರು.<br>ಪಠ್ಯಭಾಗವನ್ನು ಮಾದರಿ ವಾಚನ ಮಾಡುವರು.<br>'ಜೋಗ ಜಲಪಾತ'ದ ಸಂಗ್ರಹಿತ ಚಿತ್ರ-ಲೇಖನಗಳನ್ನು ಮಕ್ಕಳಿಗೆ ತೋರಿಸುವರು. |
| 4ನೇ ಅವಧಿ | 10ನಿ | ಪರಿಸರ ಅಧ್ಯಯನ - ನನ್ನ ದೇಹ | ದೇಹದ ಮುಖ್ಯ ಭಾಗಗಳನ್ನು ಗುರುತಿಸುವರು | ದೇಹದ ಭಾಗಗಳ ಚಿತ್ರಪಟ ಪಠ್ಯ ಪುಸ್ತಕ | ಶಿಕ್ಷಕರು | 2 ನೇ ತರಗತಿಯವರಿಗೆ ಹಿಂದಿನ ಅವಧಿಯಲ್ಲಿ ಹೇಳಿಕೊಟ್ಟಿರುವ "ದುಂಬಿಯಾದರೆ ನಾ ಮಕರಂದ ಹೀರುವೆ" ಎಂಬ ಹಾಡನ್ನು ಪುನರಾವರ್ತಿಸುವರು. | ಪರಿಸರ ಅಧ್ಯಯನ - ಜೇನ ಸಂಚಾರ | ಪ್ರಕೃತಿ ಸೌಂದರ್ಯವನ್ನು ಮೆಚ್ಚುವರು | ಜೇನುಗೂಡಿನ ಚಿತ್ರ ಬರೆಯುವರು | ಶಿಕ್ಷಕರು | **ಪೂ.ಸಿ.ಚ.**<br>ಹಿಂದಿನ ಅವಧಿಯಲ್ಲಿ ಕಲಿತ ಹಾಡುಗಳನ್ನು ಅಭ್ಯಾಸ ಮಾಡಿಸುವರು.<br>ಶಿಕ್ಷಕರು ಮಕ್ಕಳಿಗೆ ಸೂಚನೆಯನ್ನು ನೀಡುವರು. | ವಿಜ್ಞಾನ : ಸಸ್ಯಗಳು ಪ್ರಾಣಿಗಳು ಬೆಳೆದ ವೃಕ್ಷ | ಸಸ್ಯಗಳು, ಪ್ರಾಣಿಗಳು ಬೆಳೆದ ರೀತಿ ಪ್ರಾಣಿಗಳು, ಬೆಳವಣಿಗೆ ಮತ್ತು ಸಂತಾನಾಭಿವೃದ್ಧಿ | ಸಸ್ಯಗಳು, ಪಠ್ಯಪುಸ್ತಕದ ಚಿತ್ರಗಳು (ಭಿತ್ತಿ ಪತ್ರ) | ಶಿಕ್ಷಕರು | ಹಿಂದಿನ ತರಗತಿಯಲ್ಲಿ ಕಲಿತ ವಿಷಯಗಳ ಬಗ್ಗೆ ಪ್ರಶ್ನಿಸಿ-ಉತ್ತರ ಪಡೆಯುವರು. |
| | 30ನಿ | | | | ಹಿರೇಮಣಿ | ಪಠ್ಯ ಪುಸ್ತಕದ ಪುಟಸಂಖ್ಯೆ 23 ರಲ್ಲಿ ಇರುವ ಚಿತ್ರವನ್ನು ವೀಕ್ಷಣೆಮಾಡಿ ಕಣ್ಣು, ಕಿವಿ, ಮೂಗು, ಬಾಯಿ, ಕೈಗಳನ್ನು ಗುರುತಿಸಲು ಸೂಚನೆ ನೀಡುವರು.<br>ಮಕ್ಕಳು ಹಿರೇಮಣಿಯ ಸಹಾಯದಿಂದ ಚಟುವಟಿಕೆಯಲ್ಲಿ ಭಾಗವಹಿಸುವರು. | | | | ಹಿರೇಮಣಿ | ಮಕ್ಕಳು ಜೇನುಗೂಡಿನ ಚಿತ್ರವನ್ನು ಬರೆಯುವಂತೆ ತಿಳಿಸುವರು (ಹಿರೇಮಣಿಯ ಸಹಾಯವನ್ನು ಪಡೆಯಲು ತಿಳಿಸುವರು). | | | | ಶಿಕ್ಷಕರು | ಸಸ್ಯಗಳಲ್ಲಿ ಬೆಳವಣಿಗೆ ಯಾವ ಯಾವ ಭಾಗಗಳಲ್ಲಿ ನಡೆಯುತ್ತದೆ ಎಂಬುದನ್ನು ಸಸ್ಯವನ್ನು ಬಳಸಿ ಮಕ್ಕಳೊಂದಿಗೆ ಚರ್ಚಿಸಿ ವಿವರಿಸುವರು.<br>ಪ್ರಾಣಿಗಳಿಗೆ ಬೆಳವಣಿಗೆ ಎಲ್ಲಾ ಭಾಗಗಳಲ್ಲಿಯೂ ನಡೆಯುತ್ತದೆ ಎಂಬುದನ್ನು ವಿವರಿಸುವರು.<br>ಪ್ರಾಣಿಗಳಲ್ಲಿ ಮತ್ತು ಸಸ್ಯಗಳಲ್ಲಿ ಸಂತಾನಾಭಿವೃದ್ಧಿಯ ವಿಧಗಳನ್ನು ಮಕ್ಕಳೊಂದಿಗೆ ಚರ್ಚಿಸುವರು. |
| | 10ನಿ | | | ಪಠ್ಯ ಪುಸ್ತಕ ಪುಟಸಂಖ್ಯೆ24ರ ಚಿತ್ರಗಳು | ಶಿಕ್ಷಕರು | ಶಿಕ್ಷಕರು ಬಂದು ಪರಿಶೀಲಿಸುವರು. | ಸಾ.ಉ.ಉ.ಕಾ. | ನಿಂಬೆಹಣ್ಣಿನ ಪಾನಕವನ್ನು ತಯಾರಿಸುವರು. | ನಿಂಬೆಹಣ್ಣು ಸಕ್ಕರೆ ಯಾಲಕ್ಕಿಪುಡಿ ನೀರು | ಶಿಕ್ಷಕರು | ಪಾನಕ ತಯಾರಿಸಲು ಸೂಚನೆ ನೀಡುವರು. | ಸಮಾಜ - ವೇದಗಳ ಕಾಲ | ವೇದಗಳ ಬಗ್ಗೆ ತಿಳಿಯುವರು ಅಂದಿನ ಸಾಮಾಜಿಕ ಸ್ಥಿತಿಗಳ ಬಗ್ಗೆ ಅರಿಯುವರು. | ಪಠ್ಯ ಪುಸ್ತಕ | ಶಿಕ್ಷಕರು | ಮಕ್ಕಳು ಕಲಿತು ಅಭ್ಯಾಸ ಮಾಡಬೇಕಾದ ವಿಷಯಗಳ ಬಗ್ಗೆ ಮಾರ್ಗದರ್ಶನ ನೀಡುವರು. |
| | 30ನಿ | | | | ಶಿಕ್ಷಕರು | ಪಠ್ಯ ಪುಸ್ತಕದ ಪುಟಸಂಖ್ಯೆ 4 ರಲ್ಲಿ ಇರುವ ಚಿತ್ರಗಳನ್ನು ವೀಕ್ಷಿಸಲು ಹೇಳಿ ಪಠ್ಯ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರವನ್ನು ಪಡೆಯುವರು.<br>(ಶಿಕ್ಷಕರು ಚಿತ್ರದಲ್ಲಿರುವಂತೆ ಚಟುವಟಿಕೆಗಳನ್ನು ವೈಯಕ್ತಿಕವಾಗಿ ಮಾಡಿಸುವರು.) | | | | ಹಿರೇಮಣಿ | ಹಿರೇಮಣಿಯು ಸಹಾಯದೊಂದಿಗೆ ಪ್ರತಿಯೊಬ್ಬ ವಿದ್ಯಾರ್ಥಿಯು ನಿಂಬೆಹಣ್ಣಿನ ಪಾನಕವನ್ನು ತಯಾರು ಮಾಡುವರು.<br>ಮಕ್ಕಳು ಸಂತೋಷದಿಂದ ಭಾಗವಹಿಸುವರು. | | | | ಹಿರೇಮಣಿ | **'ಉತ್ತರ ವೇದ ಕಾಲ'**ದ ಬಗ್ಗೆ ಪಠ್ಯಪುಸ್ತಕದಲ್ಲಿರುವ ಪಠ್ಯಭಾಗವನ್ನು ಮಕ್ಕಳು ಮೌನ ವಾಚನ ಮಾಡುವರು.<br>ಹಿರೇಮಣಿಯು ಮಕ್ಕಳು ಗ್ರಹಿಸಿದ ವಿಷಯಗಳನ್ನು ಕಪ್ಪು ಹಲಗೆಯಲ್ಲಿ ಬರೆಸುವರು. |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ಫಲ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ಫಲ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ಫಲ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| **1ನೇ ಅವಧಿ** | **10ನಿ** | **ಕನ್ನಡ – ಒಗಟ್ಟಲ್ಲಿ ಬಲ** | ಕೇಳಲಾದ ಪದ್ಯದಲ್ಲಿ ಚಿಕ್ಕ ಮಾಹಿತಿಯನ್ನು ನೆನಪಿಸಿಕೊಳ್ಳುವರು. | ಕಥೆಗಳ ಚಿತ್ರ | ಶಿಕ್ಷಕರು | **ಪೂ. ಸಿ. ಚ.**<br>"ಅಮ್ಮಾ ಅಮ್ಮಾ ಒಂದೇ ಒಂದು ಉಂಡೆ ಕೊಡ್ತಿಯಾ" ಎಂಬ ಅಭಿನಯ ಗೀತೆಯನ್ನು ಹಾಡಿಸುವರು. | **ಕನ್ನಡ – ಎಚ್ಚರ ಮುಚ್ಚಳ ಜೋಡಿ** | ಪಾಠದಲ್ಲಿನ ವಿಶೇಷ ಪದಗಳನ್ನು ಗುರುತಿಸುವರು. | ಸಜಾತಿಯ ಸಂಯುಕ್ತಾಕ್ಷರಗಳ ಪದಗಳ ಪಟ್ಟಿ | ಶಿಕ್ಷಕರು | **ಪೂ. ಸಿ. ಚ.**<br>1 ನೇ ತರಗತಿಯವರೊಂದಿಗೆ ಪಾಲ್ಗೊಂಡು ಅಭಿನಯಗೀತೆಯನ್ನು ಹಾಡುವರು.<br>ಸಜಾತೀಯ ಸಂಯುಕ್ತ ಅಕ್ಷರಗಳ ಪದಗಳನ್ನು ಕಪ್ಪು ಹಲಗೆಯಲ್ಲಿ ಶಿಕ್ಷಕರು ಬರೆಯುವರು. | - | - | - | - | |
| | **30ನಿ** | | | | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಹೇಳಲಾದ ಕಥೆಗಳನ್ನು ಪುನರ್ ನೆನಪಿಸುವರು.<br>ಆ ಕಥೆಗಳಿಗೆ ಸಂಬಂಧಪಟ್ಟಂತೆ ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಹಾಕಿ ಮಕ್ಕಳು ಗ್ರಹಿಸಿರುವ ವಿಷಯವನ್ನು ತಿಳಿದು ಮೌಲ್ಯಮಾಪನ ಮಾಡುವರು. | | | | ಹಿರೇಮಣಿ | ಮಕ್ಕಳಿಂದ ಆ ಪದಗಳನ್ನು ಹಿರೇಮಣಿಯು ಓದಿಸುವನು.<br>ನಂತರ ಕಾಪಿ ಪುಸ್ತಕದಲ್ಲಿ ಅದನ್ನು ಅಂದವಾಗಿ ನಕಲು ಮಾಡುವರು. | | | | - | **– 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. –** |
| | **10ನಿ** | | | ಪದಗಳ ಮಿಂಚುಪಟ್ಟಿಗಳು | ಶಿಕ್ಷಕರು | ಮಕ್ಕಳಿಗೆ ಮುಂದಿನ ಚಟುವಟಿಕೆಯ ಬಗ್ಗೆ ಮಾರ್ಗದರ್ಶನ ನೀಡುವರು. | | ವಿರಳವಾಗಿ ಬಳಕೆಯಾಗುವ ಅಕ್ಷರ ಮತ್ತು ಸಂಯುಕ್ತಾಕ್ಷರ ಪದ ಮತ್ತು ವಾಕ್ಯಗಳನ್ನು ನಕಲು ಮಾಡುವರು | ಕಪ್ಪು ಹಲಗೆ, ಅಭ್ಯಾಸಹಾಳೆ | ಶಿಕ್ಷಕರು | ಮಕ್ಕಳ ಬರವಣಿಗೆಯನ್ನು ಪರಿಶೀಲಿಸುವರು.<br>ಕಪ್ಪು ಕಲಗೆಯ ಮೇಲೆ ಪದಗಳನ್ನು ಬರೆದು ಸಾಮೂಹಿಕವಾಗಿ ಕಪ್ಪು ಹಲಗೆಯಲ್ಲಿನ ಪದಗಳನ್ನು ಓದಿಸುವರು. | - | - | - | - | |
| | **30ನಿ** | | | | ಹಿರೇಮಣಿ | ಕೊಟ್ಟಿರುವ ಮಿಂಚುಪಟ್ಟಿಗಳಲ್ಲಿರುವ ಪದಗಳಲ್ಲಿ ಕಲಿತಿರುವ ಅಕ್ಷರಗಳನ್ನು ಗುರುತಿಸಿ ಬರೆದು ಕಲಿಯುವರು.<br>ಉದಾ :– ರಾಮಯ್ಯ, ಒಂದು, ಗಲಾಟೆ, ಸುಲಭ, ಇತ್ಯಾದಿ. | | | | ಶಿಕ್ಷಕರು | ನಂತರ ವೈಯಕ್ತಿಕವಾಗಿ ಪ್ರತಿಯೊಬ್ಬರಿಂದಲೂ ಪದಗಳನ್ನು ಓದಿಸುವರು.<br>ಒತ್ತಕ್ಷರ ಪದಗಳನ್ನು ರಚಿಸಿ, ಓದಿಸಿ ಉಕ್ತಲೇಖನ ನೀಡುವರು.<br>ರಕ್ತ, ಖಡ್ಗ, ವರ್ಷ, ಇತ್ಯಾದಿ. | | | | - | **– 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. –** |
| **2ನೇ ಅವಧಿ** | **10ನಿ** | **ಗಣಿತ – ಸಂಖ್ಯೆಗಳು** | 1 ರಿಂದ 9 ರವರೆಗಿನ ಸಂಖ್ಯೆಗಳನ್ನು ಬಳಸಿ ಏರಿಕೆ – ಇಳಿಕೆ ಕ್ರಮದಲ್ಲಿ ಬರೆಯುವರು. | ಏರಿಕೆ ಇಳಿಕೆ ಮೆಟ್ಟಿಲು | ಶಿಕ್ಷಕರು | **ಪೂ. ಸಿ. ಚ.**<br>"ಬೆಕ್ಕಣ್ಣ ಬೆಕ್ಕಣ್ಣ ಮನೆಯೊಳಗೆ ಯಾರು ಇಲ್ಲಣ್ಣ ಕಿಟಕಿ ಒಳಗೆ ಬಾರಣ್ಣ ಹಾಲಿನ ಡಬರಿ ನೆಕ್ಕಣ್ಣ" ಈ ಹಾಡು ಹೇಳಿಕೊಡುವರು. | **ಗಣಿತ – ಸಂಕಲನ** | ಮೊತ್ತ 99 ಕ್ಕೆ ಮೀರದಂತೆ ಎರಡು ಅಂಕಿಯ ಮೂರು ಸಂಖ್ಯೆಗಳ ದಶಕ ರಹಿತ ಸಂಕಲನ ಮಾಡುವರು. | ಸಂಕಲನ ಪಟ್ಟಿ | ಶಿಕ್ಷಕರು | **ಪೂ.ಸಿ.ಚ.**<br>"ಒಂದು ಒಂದು ಎರಡು ನನಗೆ ಕಣ್ಣುಗಳೆರಡು ಎರಡು ಒಂದು ಮೂರು ದಾಸಯ್ಯನ ನಾಮಗಳು ಮೂರು" ಈ ಹಾಡು ಹೇಳಿಕೊಡುವರು. | - | - | - | - | |
| | **30ನಿ** | | | | ಶಿಕ್ಷಕರು | ಹಿರೇಮಣಿಯ ನೆರವಿನಿಂದ ಅಭ್ಯಾಸ ಪುಸ್ತಕದ ಪುಟಸಂಖ್ಯೆ 46 ಮತ್ತು 48ರ ಲೆಕ್ಕಗಳನ್ನು ಅಭ್ಯಾಸ ಮಾಡುವರು. | | | | ಹಿರೇಮಣಿ | ಶಿಕ್ಷಕರು ಸಂಕಲನ ಪಟ್ಟಿ ಬಳಸಿ ಸಂಕಲನ ಮಾಡಲು ಸೂಚನೆಗಳನ್ನು ನೀಡುವರು.<br>ಮಕ್ಕಳು ಹಿರೇಮಣಿಯ ಸಹಾಯದಿಂದ 1–19 ರವರೆಗಿನ ಸಂಖ್ಯೆ ಬಳಸಿ ಸಂಕಲನ ಪಟ್ಟಿ ಬಳಸಿ ಸಂಕಲನ ಮಾಡುವರು.<br>ಉದಾ :– ಹತ್ತು ಬಿಡಿ<br>+ 1 2<br>0 3 | | | | - | **– 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. –** |
| | **10ನಿ** | **ಲಲಿತ ಕಲೆ** | ರೈಲು ಬಂಡಿ ತಯಾರಿಕೆ" | ಖಾಲಿ ಬೆಂಕಿಪೊಟ್ಟಣಗಳು | ಹಿರೇಮಣಿ | 1 ನೇ ತರಗತಿಯ ಮಕ್ಕಳಿಗೆ ಖಾಲಿ ಬೆಂಕಿ ಪೊಟ್ಟಣಗಳಿಂದ 'ರೈಲು ಬಂಡಿ'ಯನ್ನು ತಯಾರಿಸುವುದನ್ನು ಹೇಳಿಕೊಡುವರು. | | | ಚಿತ್ರ ಕಟ್ಟುಗಳು ಮತ್ತು ಬಿಡಿಗಳು | ಶಿಕ್ಷಕರು | ಮಕ್ಕಳು ಕಲಿಕೆಗೆ ಅಣಿಯಾಗುವರು. | - | - | | - | |
| | **30ನಿ** | | | | ಹಿರೇಮಣಿ | ಮಕ್ಕಳು ಅದರಂತೆ ಸಂಗ್ರಹಿಸಿದ ಖಾಲಿ ಬೆಂಕಿ ಪೊಟ್ಟಣದಿಂದ 'ರೈಲು ಬಂಡಿ' ತಯಾರಿಸುವರು<br>ಹಿರೇಮಣಿ ಮಾರ್ಗದರ್ಶನ ನೀಡುವನು. | | | | ಶಿಕ್ಷಕರು | ಶಿಕ್ಷಕರು ಅಭ್ಯಾಸ ಪುಸ್ತಕದ ಪುಟ ಸಂಖ್ಯೆ 66 ರ ಚಟುವಟಿಕೆಯನ್ನು ಮಾಡಿಸಿ ಸಂಕಲನದ ಪರಿಕಲ್ಪನೆ ಮೂಡಿಸುವರು.<br>(ಮನದಟ್ಟು ಮಾಡಿಸುವರು) | | | | - | **– 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. –** |

## ಒಂದನೇ ತರಗತಿ

| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕೋಪಕರಣ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 3 | 4 | 5 | 6 | 7 |
| 3ನೇ ಅವಧಿ | 10ನಿ | ಜೀವನ ವಿಜ್ಞಾನ – ಆಟಗಳು | ಕುಂಟೇಬಿಲ್ಲೆ ಆಟ | ಆಟ | ಶಿಕ್ಷಕರು | **ಪೂ. ಸಿ. ಚ.**<br>"ಬಣ್ಣದ ತಗಡಿನ ತುತ್ತೂರಿ ಕಾಸಿಗೆ ಕೊಂಡನು ಕಸ್ತೂರಿ... ಸರಿಗಮ ಪದನಿಸ ಊದಿದನು ಸನಿದಪ ಮಗರಿಸ ಊದಿದನು" ಎಂಬ ಹಾಡನ್ನು ಹೇಳಿಕೊಡುವರು. |
| | 30ನಿ | | | | ಶಿಕ್ಷಕರು | 2 ನೇ ತರಗತಿಯವರು ಆಡುವ ಆಟವನ್ನು ವೀಕ್ಷಿಸುವರು. ನಂತರ ಮಕ್ಕಳು ಕುಂಟುವ ಆಟವನ್ನು ಆಡುವರು. |
| | 10ನಿ | ಸಾ.ಉ.ಉ.ಕಾ. – ಸರಳವಾದ ಕಾಗದದ ಕೆಲಸ | ಬಣ್ಣದ ಕಾಗದದಿಂದ ಬೀಸಣಿಗೆ ತಯಾರಿಕೆ | ಹಾಡು | ಶಿಕ್ಷಕರು | ಮಕ್ಕಳಿಗೆ ಶಿಕ್ಷಕರು ಬಣ್ಣದ ಕಾಗದದಿಂದ ಸರಳ ಕೆಲಸಗಳನ್ನು ಮಾಡಿಸುವರು.<br>ಬಣ್ಣದ ಕಾಗದದಿಂದ ಬೀಸಣಿಗೆಯನ್ನು ತಯಾರಿಸುವುದನ್ನು ಮಕ್ಕಳಿಗೆ ತಿಳಿಸುವರು. |
| | 30ನಿ | | | | ಹಿರೇಮಣಿ | ಮಕ್ಕಳು ಗಮನವಿಟ್ಟು ವೀಕ್ಷಿಸುವರು ನಂತರ ಮಾದರಿಯಾಗಿ ತಯಾರಿಸಲು ತೊಡಗುವರು. |
| 4ನೇ ಅವಧಿ | 10ನಿ | ಪರಿಸರ ಅಧ್ಯಯನ – ನನ್ನ ದೇಹ | ದೇಹದ ಮುಖ್ಯ ಭಾಗಗಳನ್ನು ಗುರುತಿಸುವರು | ದೇಹದ ಭಾಗಗಳ ಚಿತ್ರವುಳ್ಳ ಸಂಕೇತಗಳ ಪಟ್ಟಿ | ಶಿಕ್ಷಕರು | **ಪೂ. ಸಿ. ಚ.**<br>2 ನೇ ತರಗತಿಯ ಮಕ್ಕಳೊಂದಿಗೆ ಹಾಡನ್ನು ಹೇಳಲು ಪಾಲ್ಗೊಳ್ಳುವರು. ಶಿಕ್ಷಕರು ಸೂಚನೆಗಳನ್ನು ನೀಡುವರು. |
| | 30ನಿ | | | | ಹಿರೇಮಣಿ | ಪಠ್ಯ ಪುಸ್ತಕದ ಪುಟಸಂಖ್ಯೆ 25ರಲ್ಲಿರುವ ಚಟುವಟಿಕೆಯನ್ನು ಹಿರೇಮಣಿಯ ಸಹಾಯದಿಂದ ಮಾಡಲು ಸೂಚನೆ ನೀಡುವರು.<br>(ದೇಹದ ಭಾಗಗಳಿಗೆ ಸೂಚಿಸಿರುವ ಚಿಹ್ನೆ (ಸಂಕೇತಗಳನ್ನು) ಸರಿಯಾಗಿ ಹಾಕುವಂತೆ ಹಿರೇಮಣಿ ಸೂಚಿಸಿ ಚಟುವಟಿಕೆಯನ್ನು ಮಾಡಿಸುವರು) |
| | 10ನಿ | ಸಾ.ಉ.ಉ.ಕಾ. – ಸರಳವಾದ ಕಾಗದದ ಕೆಲಸ | ಬಣ್ಣದ ಕಾಗದದಿಂದ ಬೀಸಣಿಗೆ ತಯಾರಿಸುವುದು | ಬಣ್ಣದ ಕಾಗದ | ಶಿಕ್ಷಕರು | ಶಿಕ್ಷಕರು ಪರಿಶೀಲಿಸುವರು. |
| | 30ನಿ | | | | ಹಿರೇಮಣಿ | ಚೌಕಾಕಾರದ ಬಣ್ಣದ ಕಾಗದದಿಂದ ಬೀಸಣಿಗೆ ತಯಾರಿಸುವುದನ್ನು ಮಕ್ಕಳಿಗೆ ಹೇಳಿಕೊಡುವರು. ಮಕ್ಕಳು ಸಂತೋಷದಿಂದ ಭಾಗವಹಿಸುವರು.<br>(ಮಕ್ಕಳು ವೈಯಕ್ತಿಕವಾಗಿ ಬೀಸಣಿಗೆಯನ್ನು ತಯಾರಿಸುವರು.) |

## ಎರಡನೇ ತರಗತಿ

| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕೋಪಕರಣ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 8 | 9 | 10 | 11 | 12 |
| 3ನೇ ಅವಧಿ | 10ನಿ | ಜೀವನ ವಿಜ್ಞಾನ – ಆಟಗಳು | – | ಹಾಡು, ಕುಂಟೇಬಿಲ್ಲೆ ಆಟ, ವಿಜಾತೀಯ | ಶಿಕ್ಷಕರು | **ಪೂ. ಸಿ. ಚ.**<br>1 ನೇ ತರಗತಿಯವರೊಂದಿಗೆ 2 ನೇ ತರಗತಿಯವರು ಪಾಲ್ಗೊಳ್ಳುವರು. |
| | 30ನಿ | | | | ಶಿಕ್ಷಕರು | 2 ನೇ ತರಗತಿಯ ಮಕ್ಕಳಿಗೆ ಶಿಕ್ಷಕರು ಕುಂಟೇಬಿಲ್ಲೆ ಆಟವನ್ನು ಆಡುವ ಕ್ರಮವನ್ನು ಹೇಳಿಕೊಡುವರು.<br>ಮಕ್ಕಳು ಆಸಕ್ತಿಯಿಂದ ಗುಂಪಿನಲ್ಲಿ ಭಾಗವಹಿಸುವರು. |
| | 10ನಿ | ಕನ್ನಡ – ಲಿಪಿಯ ಮತ್ತು ಓದು | ಭಾಷೆಯಲ್ಲಿನ ಎಲ್ಲಾ ಸ್ವರಗಳನ್ನು ಉಚ್ಚರಿಸುವುದು. ವಿರಳವಾಗಿ ಉಪಯೋಗಿಸುವ ಅಕ್ಷರ ಮತ್ತು ಸಂಯುಕ್ತಾಕ್ಷರಗಳನ್ನು ಗುರ್ತಿಸುವುದು | ಸಂಯುಕ್ತಾಕ್ಷರಗಳ ಮಿಂಚುಪಟ್ಟಿ ಪದಗಳ ಗಡಿಯಾರ, ಹಾಡು | ಶಿಕ್ಷಕರು | ಮಕ್ಕಳ ಚಟುವಟಿಕೆಯನ್ನು ಪರಿಶೀಲಿಸುವರು.<br>ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. |
| | 30ನಿ | | | | ಹಿರೇಮಣಿ | ವಿಜಾತೀಯ ಸಂಯುಕ್ತಾಕ್ಷರಗಳ ಮಿಂಚು ಪಟ್ಟಿಯನ್ನು ಮಕ್ಕಳು ತಮ್ಮ ಗುಂಪುಗಳಲ್ಲಿ ಹಂಚಿಕೊಂಡು ಅಕ್ಷರಗಳನ್ನು ಉಚ್ಚರಿಸುವರು.<br>ಸಂಯುಕ್ತಾಕ್ಷರಗಳ 'ಪದ ಗಡಿಯಾರ'ವನ್ನು ಗುಂಪುಗಳಿಗೆ ಕೊಟ್ಟು ಪದ ರಚನೆ ಮಾಡಿ ಓದುವರು.<br>ಉದಾ :– ತ್ಯ ಪ್ತ ಸ್ಪ |
| 4ನೇ ಅವಧಿ | 10ನಿ | ಪರಿಸರ ಅಧ್ಯಯನ – ಹೊಸ ಸಂಸಾರ | ಪಕ್ಷಿ ಸೌಂದರ್ಯವನ್ನು ಮೆಚ್ಚುವರು. | ರಟ್ಟು, ದಾರ, ಹುಲ್ಲು, ಜೇಡಿಮಣ್ಣು, ಕಡ್ಡಿ | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :–**<br>"ಕನ್ನಡದ ಮಕ್ಕಳೆಲ್ಲಾ ಒಂದಾಗಿ ಬನ್ನಿ" ಎಂಬ ಹಾಡನ್ನು ಮಕ್ಕಳಿಗೆ ಹೇಳಿಕೊಡುವರು.<br>ಮಕ್ಕಳಿಗೆ ಮುಂದಿನ ಚಟುವಟಿಕೆಗೆ ಸೂಚನೆಯನ್ನು ನೀಡುವರು. |
| | 30ನಿ | | | | ಶಿಕ್ಷಕರು | ಶಿಕ್ಷಕರ ಅಥವಾ ಹಿರಿಯರ ಸಹಾಯ ಪಡೆದು ರಟ್ಟು., ಹುಲ್ಲು, ಜೇಡಿಮಣ್ಣು, ಕಡ್ಡಿ, ಹತ್ತಿ, ಚೆಂಡು ಉಪಯೋಗಿಸಿ ಗೂಡು ಗುಹೆ ಕೊಟ್ಟಿಗೆ ಮುಂತಾದವುಗಳ ಮಾದರಿ ತಯಾರಿಸಲು ಸೂಚಿಸುವರು.<br>ದಾರದಿಂದ ಜೇಡರ ಬಲೆ ಮಾಡುವರು. |
| | 10ನಿ | ಪರಿಸರ ಅಧ್ಯಯನ – ನಮ್ಮ ಸುತ್ತಮುತ್ತ | ಮನುಷ್ಯ ಮತ್ತು ಪರಿಸರದ ಪರಸ್ಪರ ಸಂಬಂಧಗಳನ್ನು ತಿಳಿಯುವರು. ಸ್ಥಳೀಯ ಪರಿಸರದ ಬಗ್ಗೆ ಮಾಹಿತಿ ಪಡೆಯುವರು. | ಚಟುವಟಿಕೆ | ಶಿಕ್ಷಕರು | ಶಿಕ್ಷಕರು ಮಕ್ಕಳಿಗೆ ಗುಂಪು ಚಟುವಟಿಕೆಗೆ ಸೂಚನೆಗಳನ್ನು ನೀಡುವರು. |
| | 30ನಿ | | | | ಹಿರೇಮಣಿ | ಸುತ್ತಮುತ್ತಲಿನ ಪರಿಸರದ ಅಂಶಗಳನ್ನು ಗಮನಿಸಿ ಗುಂಪುಗಳಲ್ಲಿ ಕುಳಿತು ಪಟ್ಟಿ ಮಾಡಲು ಸೂಚಿಸುವರು. |

## ಐದನೇ ತರಗತಿ

| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕೋಪಕರಣ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 13 | 14 | 15 | 16 | 17 |
| 3ನೇ ಅವಧಿ | 10ನಿ | ಕನ್ನಡ – ಮಲೆನಾಡ ಸಿರಿ : ಜಲಪಾತ | ಅಪರಿಚಿತ ಸನ್ನಿವೇಶಗಳನ್ನು ಸಂಭಾಷಣೆ ಸಂವಾದ, ಚರ್ಚೆಗಳ ಮೂಲಕ ಅರ್ಥ ಮಾಡಿಕೊಳ್ಳುವರು. | ನುಡಿಗಟ್ಟುಗಳ ಸಂಗ್ರಹ | ಶಿಕ್ಷಕರು | ಮಕ್ಕಳು ಅಭ್ಯಾಸ ಮಾಡಬೇಕಾದ ವಿಷಯಗಳನ್ನು ಸೂಚಿಸುವರು. |
| | 30ನಿ | | | | ಹಿರೇಮಣಿ | "ಮಲೆನಾಡ ಸಿರಿ" ಪಠ್ಯಭಾಗದಲ್ಲಿ ಕಲಿತ ಹೊಸ ಪದಗಳನ್ನು ಅರ್ಥ ಸಹಿತ ಬಾಯಿಪಾಠ ಮಾಡುವರು.<br>ನುಡಿಗಟ್ಟುಗಳಿಗೆ ವಾಕ್ಯ ರಚನೆ ಮಾಡುವುದನ್ನು ಕಲಿಯುವರು.<br>ಉದಾ :– ಎರಡು ಕಣ್ಣು ಸಾಲದು, ನದಿ ತೀರ, ನೆರಳು ನೀಡು ಇತ್ಯಾದಿ |
| | 10ನಿ | | ಸನ್ನಿವೇಶ ಮತ್ತು ಘಟನೆಗಳನ್ನು ವಿವರಿಸುವರು, ಲೇಖನ ಚಿಹ್ನೆಗಳನ್ನು ವಾಕ್ಯಗಳಲ್ಲಿ ಬಳಸುವರು. | ಜಲಪಾತದ ಚಿತ್ರಗಳು | ಶಿಕ್ಷಕರು | ಮಕ್ಕಳ ಕಲಿಕೆಯನ್ನು ಪರಿಶೀಲಿಸುವರು. |
| | 30ನಿ | | | | ಶಿಕ್ಷಕರು | "ಜಲಪಾತ" ಪಾಠ್ಯಭಾಗದ ಬೋಧನೆಯನ್ನು ಮುಂದುವರೆಸುವರು.<br>ಪಾಠವನ್ನು ಮಾದರಿ ವಾಚನ ಮಾಡುವರು. ಮಕ್ಕಳಿಂದ ಓದಿಸುವರು. ಹೊಸ ಪದಗಳ ಅರ್ಥ ವಿವರಣೆಯೊಂದಿಗೆ ಗೋಕಾಕ್ ಜಲಪಾತದ ಚಿತ್ರ ಬಳಸಿ ವಿವರಿಸುವರು. |
| 4ನೇ ಅವಧಿ | 10ನಿ | ವಿಜ್ಞಾನ – ಸಸ್ಯಗಳು ಪ್ರಾಣಿಗಳು ಜೀವ ವೈವಿಧ್ಯಗಳು | ಸಸ್ಯಗಳು, ಪ್ರಾಣಿಗಳು ಜೀವ ವೈವಿಧ್ಯಗಳನ್ನು ಅರಿಯುವರು. | ಪ್ರಶ್ನಾವಳಿಗಳು | ಶಿಕ್ಷಕರು | ಶಿಕ್ಷಕರು ಮಕ್ಕಳಿಗೆ ಉತ್ತರಗಳನ್ನು ಬರೆಯಲು ಅಗತ್ಯ ಸೂಚನೆಗಳನ್ನು ನೀಡುವರು. |
| | 30ನಿ | | | | ಹಿರೇಮಣಿ | ಅಭ್ಯಾಸದ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯುವರು.<br>ಹಿರೇಮಣಿ ಮಾರ್ಗದರ್ಶನ ನೀಡುವನು. |
| | 10ನಿ | ಸಮಾಜ – ವೇದಗಳ ಕಾಲ | ವೇದಗಳ ಬಗ್ಗೆ ತಿಳಿಯುವರು. ಅಂದಿನ ಸಾಮಾಜಿಕ ಸ್ಥಿತಿಗಳ ಬಗ್ಗೆ ಅರಿಯುವರು. | ಚಿತ್ರಗಳು ಪಠ್ಯ ಪುಸ್ತಕ | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಬೋಧಿಸಿದ ವಿಷಯಗಳ ಬಗ್ಗೆ ಪ್ರಶ್ನಿಸಿ ಉತ್ತರ ಪಡೆಯುವರು. |
| | 30ನಿ | | | | ಶಿಕ್ಷಕರು | 'ಉತ್ತರ ವೇದಗಳ ಕಾಲ'ದ ಬಗ್ಗೆ ಮಕ್ಕಳಿಗೆ ವಿವರಣೆ ನೀಡುವರು.<br>ಋಗ್ವೇದ ಕಾಲದ ಸಂಸ್ಕೃತಿಗೂ – ಉತ್ತರ ವೇದದ ಕಾಲದ ಸಂಸ್ಕೃತಿಗೂ ಆದ ಬದಲಾವಣೆಗಳನ್ನು ಮುಖ್ಯಾಂಶಗಳ ರೂಪದಲ್ಲಿ ಕಪ್ಪು ಹಲಗೆಯಲ್ಲಿ ಬರೆಯುವರು.<br>ಈ ಕಾಲದಲ್ಲಿ ರಚಿತವಾದ 3 ವೇದಗಳು – 4 ಆಶ್ರಮಗಳು – 4 ವರ್ಣಗಳ ಬಗ್ಗೆ ತಿಳಿಸುವರು. |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| 1ನೇ ಅವಧಿ | 10ನಿ | ಕನ್ನಡ – ಸಣ್ಣಿ ಮದುವೆ | ಸರಳ ಹಾಗೂ ಒತ್ತಕ್ಷರಯುಕ್ತ ಪದ್ಯಗಳು ಮತ್ತು ಕಥೆಗಳನ್ನು ಆಲಿಸುವುದರ ಜೊತೆಗೆ ಅರ್ಥ ಮಾಡಿಕೊಳ್ಳುವರು. | "ಕಿನ್ನರಿ" ಧ್ವನಿಸುರುಳಿ, ಟೇಪ್ ರೆಕಾರ್ಡರ್ | ಶಿಕ್ಷಕರು | **ಪೂ.ಸಿ.ಚ.**<br>"ಕೊಕ್ಕೋ ಕೋಳಿ ಬೆಳಗಾಯ್ತು ಏಳಿ" ಎಂಬ ಅಭಿನಯ ಗೀತೆಯನ್ನು ಹಾಡಿಸುವರು.<br>ಮಕ್ಕಳಿಗೆ ಧ್ವನಿ ಸುರುಳಿ ಆಲಿಸಲು ಸೂಚನೆಯನ್ನು ನೀಡುವರು. | ಕನ್ನಡ – ಒತ್ತಿನ ಮತ್ತು ಜೋಡಿ | 1.ಪಾಠದಲ್ಲಿನ ಎಲ್ಲಾ ಸ್ವರಗಳನ್ನು ಗುರ್ತಿಸುವರು.<br>2.ವಿರಳವಾಗಿ ಉಪಯೋಗಿಸುವ ಅಕ್ಷರ ಮತ್ತು ಸಂಯುಕ್ತಾಕ್ಷರಗಳನ್ನು ಗುರ್ತಿಸುವರು. | ವಿಜಾತೀಯ ಸಂಯುಕ್ತಾಕ್ಷರಗಳ ಪಟ್ಟಿ ಕಾರ್ಡ್‌ಗಳು | ಶಿಕ್ಷಕರು | **ಪೂ.ಸಿ.ಚ.**<br>1 ನೇ ತರಗತಿಯವರೊಂದಿಗೆ ಪಾಲ್ಗೊಳ್ಳುವರು. | | | | - | |
| | 30ನಿ | | | | ಹಿರೇಮಣಿ | 'ಕಿನ್ನರಿ' ಎಂಬ ಧ್ವನಿ ಸುರುಳಿಯನ್ನು ಹಾಕಿ ಮಕ್ಕಳಿಗೆ ಹಾಡುಗಳನ್ನು ಆಲಿಸಲು ಅವಕಾಶ ಮಾಡುವರು.<br>"ಭಾಳಾ ಒಳ್ಳೆವ್ರು ನಮ್ ಮಿಸ್ಸು" ಎಂಬ ಗೀತೆ ಇನ್ನಿತರ ಗೀತೆಗಳನ್ನು ಆಲಿಸುವರು. | | | | ಶಿಕ್ಷಕರು | ವಿಜಾತೀಯ ಸಂಯುಕ್ತಾಕ್ಷರಗಳ ಪದಗಳನ್ನು ಕಪ್ಪು ಹಲಗೆಯಲ್ಲಿ ಬರೆಯುವರು.<br>ಉದಾ :– ಆತ್ಮ, ಆಸ್ತಿ, ಆಪ್ತ, ಆದ್ಯತೆ, ಸತ್ಯ, ನಗ್ನ, ಭಗ್ನ, ಉತ್ತಮ ಚಿಕಿತ್ಸೆ ಇತ್ಯಾದಿ<br>ಇಂಥಹ ಪದಗಳನ್ನು ಓದುವ ಕ್ರಮ ಮತ್ತು ಬರೆಯುವ ಕ್ರಮವನ್ನು ಕಲಿಸುವರು. | - | - | - | - | – **3** & **4** ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 10ನಿ | | | ಪಠ್ಯ ಪುಸ್ತಕ, ಅಭಿನಯ ಗೀತೆ | ಶಿಕ್ಷಕರು | ಮಕ್ಕಳು ಕಲಿತಿರುವ ಹಾಡುಗಳನ್ನು ಹೇಳಿಸುವರು. | | 3. ಸಂಯುಕ್ತಾಕ್ಷರ ಪದ ಮತ್ತು ವಾಕ್ಯಗಳನ್ನು ನಕಲು ಮಾಡುವರು | ಮಿಂಚುಪಟ್ಟಿಗಳು | ಶಿಕ್ಷಕರು | ಮುಂದಿನ ಅವಧಿಯಲ್ಲಿ ಮಕ್ಕಳು ಅಭ್ಯಾಸ ಮಾಡಬೇಕಾದ ವಿಷಯದ ಬಗ್ಗೆ ಸೂಚನೆ ನೀಡುವರು. | | | | - | |
| | 30ನಿ | | | | ಶಿಕ್ಷಕರು | "ಸಣ್ಣಿ ಮದುವೆ" ಪದ್ಯದ 6 ಸಾಲುಗಳನ್ನು ರಾಗವಾಗಿ ಅಭಿನಯ ಸಹಿತವಾಗಿ ಮಕ್ಕಳಿಗೆ ಹೇಳಿಕೊಡುವರು.<br>ಮಕ್ಕಳಿಂದ ಪುನಃ ಪುನಃ ಹಾಡಿಸಿ ಅಭ್ಯಾಸ ಮಾಡಿಸುವರು. | | | | ಹಿರೇಮಣಿ | ಕಪ್ಪು ಹಲಗೆಯಲ್ಲಿ ಬರೆದ ಪದಗಳನ್ನು ಸಾಮೂಹಿಕವಾಗಿ ಮತ್ತು ವೈಯಕ್ತಿಕವಾಗಿ ಓದುವರು. ಪದಗಳನ್ನು ಅಂದವಾಗಿ ನಕಲು ಮಾಡುವರು.<br>ಶಿಕ್ಷಕರು ಪರಿಶೀಲಿಸುವರು. | - | - | - | - | – **3** & **4** ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| 2ನೇ ಅವಧಿ | 10ನಿ | ಗಣಿತ – ಸಂಖ್ಯೆಗಳು | 1 ರಿಂದ 9 ರವರೆಗಿನ ಸಂಖ್ಯೆಗಳನ್ನು ಏರಿಕೆ ಇಳಿಕೆ ಕ್ರಮಗಳಲ್ಲಿ ಬರೆಯುವರು. | ಏರಿಕೆ ಇಳಿಕೆ ಮೆಟ್ಟಿಲು, ಅಂಕಿಗಳ ಮಿಂಚು ಪಟ್ಟಿಗಳು | ಶಿಕ್ಷಕರು | ಹಿಂದಿನ ದಿನದ ಅಭಿನಯ ಗೀತೆ ಹಾಡಿಸುವರು.<br>ಶಿಕ್ಷಕರು ಮಕ್ಕಳಿಗೆ ಸೂಚನೆಗಳನ್ನು ನೀಡುವರು. | ಲಲಿತಕಲೆ – "ದೇಶಭಕ್ತಿ ಗೀತೆ" | ದೇಶಭಕ್ತಿ ಗೀತೆಯನ್ನು ಹಾಡುವರು | ಹಾಡುಗಳು | ಶಿಕ್ಷಕರು | 1 ನೇ ತರಗತಿಯವರೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | | | | - | |
| | 30ನಿ | | | | ಹಿರೇಮಣಿ | ಶಿಕ್ಷಕರು ಮಕ್ಕಳನ್ನು ಗುಂಪುಗಳಲ್ಲಿ ಕೂಡಿಸುವರು. ಅಂಕಿಗಳ ಮಿಂಚು ಪಟ್ಟಿಗಳನ್ನು ಕೊಟ್ಟು ಹಿರೇಮಣಿಯ ಸಹಾಯದಿಂದ ಏರಿಕೆ ಇಳಿಕೆ ಮೆಟ್ಟಿಲಿನ ಮೇಲೆ ಏರಿಕೆ ಕ್ರಮ ಮತ್ತು ಇಳಿಕೆ ಕ್ರಮಗಳಲ್ಲಿ ಜೋಡಿಸುವ ಚಟುವಟಿಕೆ ಮಾಡಿಸುವರು. | | | | ಶಿಕ್ಷಕರು | ಗಾಂಧಿ ತಾತನ ಸನ್ನಿಧಿಗೊಂದು ಬಾಲಕಿ ಬರೆದ ವಿನಂತಿ ವಂದಿಸಿ ಮೊದಲು ನಿನಗಿಂದು ತಿಳಿಸುವೆನಿಲ್ಲಿಯ ರೀತಿ;<br>ಈ ದೇಶಭಕ್ತಿ ಗೀತೆಯನ್ನು ಭಾವಪೂರ್ಣವಾಗಿ ಶಿಕ್ಷಕರು ಹೇಳಿಕೊಡುವರು. | - | - | - | - | – **3** & **4** ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 10ನಿ | ಗಣಿತ – ಸಂಖ್ಯೆಗಳು | 1 ರಿಂದ 9 ರವರೆಗಿನ ಸಂಖ್ಯೆ ಬಳಸಿ ಕ್ರಮ ವಾಚಕಗಳನ್ನು ಗುರ್ತಿಸುವರು ಮತ್ತು ಬರೆಯುವರು. | ಹಣ್ಣುಗಳು, ಹೂಗಳು, ಚಿತ್ರಗಳು ಮತ್ತು ಇತರೆ ವಸ್ತುಗಳು | ಶಿಕ್ಷಕರು | ಮಕ್ಕಳು ಕಲಿಕೆಗೆ ಅಣಿಯಾಗುವರು. | ಗಣಿತ – ಸಂಕಲನ | ಮೊತ್ತ 99ಕ್ಕೆ ಮೀರದಂತೆ ಎರಡು ಅಥವಾ ಮೂರು ಸಂಖ್ಯೆಗಳ ದಶಕ ರಹಿತ ಸಂಕಲನ ಮಾಡುವರು. | ಹತ್ತರ ಕಟ್ಟುಗಳು ಮತ್ತು ಬಿಡಿಗಳು | ಶಿಕ್ಷಕರು | ಶಿಕ್ಷಕರು ಸೂಚನೆಗಳನ್ನು ನೀಡುವರು. | | | | - | |
| | 30ನಿ | | | | ಶಿಕ್ಷಕರು | ವಸ್ತುಗಳ ಅಥವಾ ಹಣ್ಣುಗಳ ಚಿತ್ರಗಳನ್ನು ಒಂದರ ಪಕ್ಕದಲ್ಲಿ ಒಂದನ್ನು ಜೋಡಿಸಿ ಈ ಕೆಳಗಿನಂತೆ ಪ್ರಶ್ನೆಗಳನ್ನು ಕೇಳಿ ಕ್ರಮ ವಾಚಕಗಳ ಪರಿಕಲ್ಪನೆ ಮೂಡಿಸುವರು.<br>ಉದಾ : ಮೊದಲನೆಯದು ಯಾವುದು? ಎರಡನೆಯದು ಯಾವುದು?<br>ಅಭ್ಯಾಸ ಪುಸ್ತಕದ ಪುಟ ಸಂಖ್ಯೆ 50 ರ ಚಟುವಟಿಕೆ ಮಾಡಿಸುವರು. | | | | ಹಿರೇಮಣಿ | ವಿದ್ಯಾರ್ಥಿಗಳಿಗೆ ಹತ್ತರ ಕಟ್ಟುಗಳು ಮತ್ತು ಬಿಡಿಗಳನ್ನು ಕೊಟ್ಟು ಅವುಗಳನ್ನು ಹಿರೇಮಣಿ ಸಹಾಯದಿಂದ ಕೂಡಿಸಲು ಸೂಚಿಸುವರು.<br>ಉದಾ :– 4 ಹತ್ತುಗಳು 1 ಬಿಡಿಗಳು<br>3 ಹತ್ತುಗಳು 2 ಬಿಡಿಗಳು<br>7 ಹತ್ತುಗಳು 3 ಬಿಡಿಗಳು<br>ಹಿರೇಮಣಿಯ ನೇತೃತ್ವದಲ್ಲಿ ಮಕ್ಕಳು ಚಟುವಟಿಕೆಯಲ್ಲಿ ತೊಡಗುವರು. | - | - | - | - | – **3** & **4** ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |

**ಒಂದನೇ ತರಗತಿ**

| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ವಿಧಾನ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 3 | 4 | 5 | 6 | 7 |
| 3ನೇ ಅವಧಿ | 10ನಿ | ಜೀವನ ವಿಜ್ಞಾನ – ಆರೋಗ್ಯ ಶಿಕ್ಷಣ | ಕಣ್ಣಿನ ಕಾರ್ಯ ಮತ್ತು ಆರೋಗ್ಯ ರಕ್ಷಣೆಯ ಬಗ್ಗೆ ತಿಳಿಯುವುದು. | ಕಣ್ಣಿನ ಚಿತ್ರಪಟ/ಮಣ್ಣಿನ ಮಾದರಿ | ಶಿಕ್ಷಕರು | **ಪೂ.ಸಿ.ಚ.**<br>5 ನೇ ತರಗತಿಯ ಮಕ್ಕಳೊಂದಿಗೆ ಧ್ವನಿ ಸುರುಳಿ ಆಲಿಸುವರು. |
| | 30ನಿ | | | | ಹಿರೇಮಣಿ | ಕಣ್ಣಿನ ಪ್ರಾಮುಖ್ಯತೆಯನ್ನು ವಿವರಿಸುವರು.<br>ಕಣ್ಣಿನ ಆರೋಗ್ಯದ ಬಗ್ಗೆ ತೆಗೆದುಕೊಳ್ಳಬಹುದಾದ ಕ್ರಮ ಮತ್ತು ಸೇವಿಸಬೇಕಾದ ಆಹಾರ ಪದಾರ್ಥಗಳ ಬಗ್ಗೆ ತಿಳಿಸುವರು.<br>ಕಣ್ಣನ್ನು ರೋಗರುಜಿನಗಳಿಂದ ಹಾಗೂ ಅಪಾಯಕರ ವಸ್ತುಗಳಿಂದ ಹೇಗೆ ರಕ್ಷಿಸಿಕೊಳ್ಳಬಹುದು ಎಂಬುದನ್ನು ಚರ್ಚಿಸುವರು. |
| | 10ನಿ | ಲಲಿತ ಕಲೆ – ದೇಶಭಕ್ತಿ ಗೀತೆ | ದೇಶಭಕ್ತಿ ಗೀತೆಯನ್ನು ಸ್ವತಂತ್ರವಾಗಿ, ಸಾಮೂಹಿಕವಾಗಿ ಹಾಡುವರು. | ದೇಶಭಕ್ತಿ ಗೀತೆ | ಶಿಕ್ಷಕರು | ಹಿಂದಿನ ಅವಧಿಗಳಲ್ಲಿ ಹೇಳಿಕೊಟ್ಟ "ಗಾಂಧೀ ತಾತನ ಸನ್ನಿಧಿ"ಗೊಂದು ದೇಶಭಕ್ತಿ ಗೀತೆಯನ್ನು ಪುನರಾವರ್ತನೆ ಮಾಡಿಸಿ ಮಕ್ಕಳಿಂದ ಸಾಮೂಹಿಕವಾಗಿ ಹಾಡಿಸುವರು. |
| | 30ನಿ | | | | ಹಿರೇಮಣಿ | ಮಕ್ಕಳು ದೇಶಭಕ್ತಿ ಗೀತೆಯನ್ನು ಹೇಳುವರು. |
| 4ನೇ ಅವಧಿ | 10ನಿ | ಪರಿಸರ ಅಧ್ಯಯನ – ನನ್ನ ದೇಹ | ದೇಹದ ಮುಖ್ಯ ಭಾಗಗಳನ್ನು ಗುರುತಿಸುವರು | ಕಣ್ಣು, ಕಿವಿ ಇತ್ಯಾದಿ ಬಗ್ಗೆ ಚಟುವಟಿಕೆ | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :–**<br>"ಕೆಲಸಕ್ಕೆ ಬಾರೆ ಮಲ್ಲಕ್ಕ ಸೊಂಟ ನೋವು ನೋಡಕ್ಕ" ಎಂಬ ಹಾಡನ್ನು ಅಭಿನಯದ ಮೂಲಕ ಆಡಿಸುವರು. |
| | 30ನಿ | | | | ಶಿಕ್ಷಕರು | ಪಠ್ಯ ಪುಸ್ತಕದ ಪುಟಸಂಖ್ಯೆ 26 ರಲ್ಲಿ ಇರುವ ತಿಳಿ–ಕಲಿ ಯ ಅಂಶದಲ್ಲಿ ನೀಡಿರುವ ಚಿತ್ರಗಳಿಗೆ ಒಂದು ಚಟುವಟಿಕೆಯನ್ನು (ಅಂದರೆ ಕಣ್ಣಾರು, ಕಿವಿಯಾರು) ಎಂಬ ಚಟುವಟಿಕೆಯನ್ನು ಆಡಿಸುವರು. ಕಣ್ಣು, ಕಿವಿ, ಮೂಗು, ಬಾಯಿ, ಕೈ, ಕಾಲುಗಳಿಂದ ಆಗುವ ಕೆಲಸ ಹಾಗೂ ಸ್ವಚ್ಛತೆಯ ಬಗ್ಗೆ ಮಾಹಿತಿಯನ್ನು ನೀಡುವರು.<br>ಮಕ್ಕಳು ಸಂತೋಷದಿಂದ ಪಾಲ್ಗೊಳ್ಳುವರು. |
| | 10ನಿ | | | ಚಿತ್ರಗಳಿಗೆ ಸರಿಯಾಗಿ ಸಂಖ್ಯೆಗಳನ್ನು ತುಂಬುವುದು | ಶಿಕ್ಷಕರು | ಶಿಕ್ಷಕರು ಮಕ್ಕಳಿಗೆ ಸೂಚನೆಯನ್ನು ನೀಡುವರು. |
| | 30ನಿ | | | | ಹಿರೇಮಣಿ | ಹಿರೇಮಣಿಯ ಸಹಾಯದಿಂದ ಪುಟಸಂಖ್ಯೆ 26 ಮತ್ತು 27 ರಲ್ಲಿ ಇರುವ ಚಟುವಟಿಕೆಯಲ್ಲಿ ಭಾಗವಹಿಸಲು ಸೂಚಿಸುವರು ಹಾಗು ಆ ಚಟುವಟಿಕೆ ಮಾಡಿಸುವರು. |

**ಎರಡನೇ ತರಗತಿ**

| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ವಿಧಾನ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 8 | 9 | 10 | 11 | 12 |
| 3ನೇ ಅವಧಿ | 10ನಿ | ಜೀವನ ವಿಜ್ಞಾನ – ಆರೋಗ್ಯ ಶಿಕ್ಷಣ | ಕಣ್ಣಿನ ಆರೋಗ್ಯ ಮತ್ತು ರಕ್ಷಣೆಯ ಬಗ್ಗೆ ತಿಳಿಯುವರು. | ಕಣ್ಣಿನ ಚಿತ್ರಪಟ ಕಣ್ಣಿನ ಮಾದರಿ | ಶಿಕ್ಷಕರು | **ಪೂ.ಸಿ.ಚ.**<br>5 ನೇ ತರಗತಿಯವರೊಂದಿಗೆ ಧ್ವನಿ ಸುರುಳಿಯನ್ನು ಆಲಿಸುವರು. |
| | 30ನಿ | | | | ಹಿರೇಮಣಿ | ಎರಡೂ ತರಗತಿಯ ಸಾಮರ್ಥ್ಯಗಳಲ್ಲಿ ಸಾಮ್ಯತೆ ಇರುವುದರಿಂದ ಚಟುವಟಿಕೆಯಲ್ಲಿ ಒಟ್ಟಿಗೆ ಪಾಲ್ಗೊಳ್ಳುವರು. |
| | 10ನಿ | ಲಲಿತಕಲೆ – "ದೇಶಭಕ್ತಿ ಗೀತೆ" | ದೇಶಭಕ್ತಿ ಗೀತೆಯನ್ನು ಸ್ವತಂತ್ರವಾಗಿ ಸಾಮೂಹಿಕವಾಗಿ ಹಾಡುವರು | ದೇಶಭಕ್ತಿ ಗೀತೆ, ಹಾಡು | ಶಿಕ್ಷಕರು | ಮಕ್ಕಳು ಒಂದನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 30ನಿ | | | | ಹಿರೇಮಣಿ | – |
| 4ನೇ ಅವಧಿ | 10ನಿ | ಪರಿಸರ ಅಧ್ಯಯನ – ನನ್ನ ಸುತ್ತಮುತ್ತ | ಮನುಷ್ಯ ಮತ್ತು ಪರಿಸರದ ಪರಸ್ಪರ ಸಂಬಂಧಗಳನ್ನು ಅರಿಯುವರು. | ವಸ್ತು ಪತ್ರಿಕೆಗಳು | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :–**<br>"ಕೆಲಸಕ್ಕೆ ಬಾರೇ ಮಲ್ಲಕ್ಕ ಸೊಂಟ ನೋವು ನೋಡಕ್ಕ ನೀರು ಸೇದು ಮಲ್ಲಕ್ಕ ಹಗ್ಗ ಬಿಂದಿಗೆ ಇಲ್ಲಕ್ಕ" ಎಂಬ ಹಾಡನ್ನು ಅಭಿನಯದ ಮೂಲಕ ಹೇಳಿಸುವರು. |
| | 30ನಿ | | | | ಹಿರೇಮಣಿ | ಶಿಕ್ಷಕರು ಮಕ್ಕಳಿಗೆ ಅಗತ್ಯ ಸೂಚನೆಗಳನ್ನು ನೀಡುವರು.<br>ಮೇಲೆ ಹೇಳಿ ಕೊಟ್ಟಂತಹ ಕೆಲವು ವಸ್ತುಗಳನ್ನು ಅಥವಾ ಪರಿಸರದಲ್ಲಿರುವ ವಸ್ತುಗಳನ್ನು ಪಟ್ಟಿ ಮಾಡಲು ತಿಳಿಸುವರು.<br>ಉದಾ :– ಕೆಲಸ<br>ಹಗ್ಗ ಪಾತ್ರೆ<br>ಬಿಂದಿಗೆ ಬಟ್ಟೆ<br>ನೀರು ಇತ್ಯಾದಿ |
| | 10ನಿ | ಸಾ.ಉ.ಕಾ. – ಬಣ್ಣದ ಹಾಳೆಗಳಿಂದ ತೋರಣಗಳನ್ನು ತಯಾರಿಸುವುದು | ನಿರುಪಯುಕ್ತ ವಸ್ತುಗಳನ್ನು ಬಳಸಿಕೊಂಡು ತನ್ನ ಪರಿಸರವನ್ನು ಅಲಂಕಾರ ಮಾಡುವರು. | ದಾರ, ಬಣ್ಣದ ಹಾಳೆ ಗೋಂದು ಕತ್ತರಿ | ಶಿಕ್ಷಕರು | ಶಿಕ್ಷಕರು ಬಣ್ಣದ ಹಾಳೆಗಳಲ್ಲಿ ಕತ್ತರಿಸಿದ ಎಲೆಗಳನ್ನು ಎಲ್ಲಾ ಮಕ್ಕಳಿಗೆ ನೀಡಿ ತೋರಣ ತಯಾರಿಸುವ ವಿಧಾನವನ್ನು ಮಾದರಿಯಾಗಿ ಮಕ್ಕಳಿಗೆ ತೋರಿಸಿ ನಂತರ ಹಿರೇಮಣಿಯ ನೇತೃತ್ವದಲ್ಲಿ ಕತ್ತರಿಸಲಾದ ಕಾಗದದ ಎಲೆಗಳನ್ನು ದಾರಗಳಿಗೆ ಅಂಟಿಸುವಂತೆ ಸೂಚನೆ ನೀಡುವರು. |
| | 30ನಿ | | | | ಹಿರೇಮಣಿ | ಮಕ್ಕಳು ತೋರಣವನ್ನು ತಯಾರಿಸುವರು. |

**ಐದನೇ ತರಗತಿ**

| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ವಿಧಾನ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 13 | 14 | 15 | 16 | 17 |
| 3ನೇ ಅವಧಿ | 10ನಿ | ಕನ್ನಡ – ಪದ್ಯಪಾಠ ೨೦ : ಜಲಪಾತ | * ಸನ್ನಿವೇಶಗಳನ್ನು ಅರ್ಥ ಮಾಡಿಕೊಳ್ಳುವರು.<br>* ಸನ್ನಿವೇಶಗಳನ್ನು ವಿವರಿಸುವರು.<br>* ಲೇಖನ ಚಿಹ್ನೆಗಳನ್ನು ಸಮರ್ಪಕವಾಗಿ ಬಳಸುವರು. | ಧ್ವನಿ ಸುರುಳಿ ಜಲಪಾತಗಳ ಚಿತ್ರಗಳು, ಟೇಪ್ ರಿಕಾರ್ಡರ್ | ಶಿಕ್ಷಕರು | **ಪೂ.ಸಿ.ಚ.**<br>"ಜೇನಿನ ಮಳೆಯೋ ಹಾಲಿನ ಹೊಳೆಯೋ" ಎಂಬ ಚಲನಚಿತ್ರ ಗೀತೆಯ ಧ್ವನಿ ಸುರುಳಿಯನ್ನು ಕೇಳಿಸುವರು. |
| | 30ನಿ | | | | ಶಿಕ್ಷಕರು | 'ಜಲಪಾತ' ಪಠ್ಯಭಾಗವನ್ನು ಮುಂದುವರೆಸುವರು.<br>'ಧನುಷ್ಕೋಟಿ ಜಲಪಾತ'ದ ಬಗ್ಗೆ ವಿವರಿಸುವರು.<br>ಸಂಗ್ರಹಿತ ಚಿತ್ರ–ಲೇಖನಗಳನ್ನು ತೋರಿಸಿ ವಿವರಿಸುವರು. |
| | 10ನಿ | ವಿಜ್ಞಾನ – ಪ್ರಕೃತಿಯ ಭೂ ಸ್ವರೂಪಗಳು | ವಿವಿಧ ಬಗೆಯ ಭೂ ಸ್ವರೂಪಗಳು | ಗೋಳ, ಭೂಪಟ, ಶಿಲೆಗಳ ವಿಧಗಳ (ಮಾದರಿಗಳು) ಅಥವಾ ಚಿತ್ರಗಳು | ಶಿಕ್ಷಕರು | ಭೂ ಸ್ವರೂಪ ಕುರಿತಾದ ಚುಕ್ಕಿ ಚಿನ್ನ ಕೈಪಿಡಿಯ ಪುಟ ಸಂಖ್ಯೆ 85ರ ಹಾಡು ಹೇಳಿಕೊಡುವರು. |
| | 30ನಿ | | | | ಶಿಕ್ಷಕರು | ಗೋಳವನ್ನು ಬಳಸಿ ಭೂಮಿಯ ಮೇಲೆ ನೆಲ, ಜಲ ಪ್ರದೇಶ ಗುರುತಿಸುವರು.<br>ಭೂಪಟದಲ್ಲಿ ಖಂಡಗಳು ಸಾಗರಗಳನ್ನು ಗುರುತಿಸುವರು.<br>ಶಿಲೆಗಳು ಉಂಟಾಗುವ ವಿಧಾನ, ಶಿಲೆಗಳ ವಿಧಗಳ ಬಗ್ಗೆ ಚಿತ್ರ ತೋರಿಸಿ ವಿವರಿಸುವರು. |
| 4ನೇ ಅವಧಿ | 10ನಿ | ಜೀವನ ವಿಜ್ಞಾನ – ನಾಯಿ ಮತ್ತು ಮೂಳೆ ಆಟ | * ಸಂಕೇತ ಮತ್ತು ಸಮಯದ ಪ್ರಜ್ಞೆಯನ್ನು ಬೆಳೆಸುತ್ತಾ ಮನರಂಜನೆ ಪಡೆಯುವರು. | ಪ್ರಾಣಿಗಳು | ಹಿರೇಮಣಿ | 1 ಮತ್ತು 2ನೇ ತರಗತಿಯವರೊಂದಿಗೆ ಹಾಡು ಹೇಳುವರು.<br>ಶಿಕ್ಷಕರು ಆಟ ಆಡುವ ಕ್ರಮವನ್ನು ಮಕ್ಕಳಿಗೆ ತಿಳಿಸುವರು. |
| | 30ನಿ | | | | – | ಹಿರೇಮಣಿಯ ನೇತೃತ್ವದಲ್ಲಿ ಮಕ್ಕಳು "ನಾಯಿ ಮತ್ತು ಮೂಳೆ" ಆಟವನ್ನು ನಿಯಮ ಬದ್ಧವಾಗಿ ಆಡುವರು. |
| | 10ನಿ | ಸಮಾಜ – ವೇದಗಳ ಕಾಲ | ವೇದಗಳ ಬಗ್ಗೆ ತಿಳಿಯುವುದು ಅಂದಿನ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಅರಿಯುವುದು. | ಸಂಗ್ರಹಿತ ಚಿತ್ರಗಳು | ಶಿಕ್ಷಕರು | ಹಿಂದಿನ ತರಗತಿಯ ವಿಷಯಗಳನ್ನು ಪ್ರಶ್ನೆಗಳ ಮೂಲಕ ಪುನರಾವರ್ತಿಸುವರು. |
| | 30ನಿ | | | | ಶಿಕ್ಷಕರು | ರಾಜಕೀಯ ವ್ಯವಸ್ಥೆಯ ಚಿತ್ರಣವನ್ನು ಮಕ್ಕಳಿಗೆ ಮೂಡಿಸುವರು.<br>ರಾಜ–ಮಂತ್ರಿ, ಸಭಾ–ಸಮಿತಿಗಳ ಕಲ್ಪನೆ ಮೂಡಿಸುವರು.<br>ಅಶ್ವಮೇಧ – ರಾಜಾಸೂಯ ಯಾಗಗಳ ಬಗ್ಗೆ ವಿವರಿಸುವರು. |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| 1ನೇ ಅವಧಿ | 10ನಿ | ಕನ್ನಡ – ಸಣ್ಣಿ ಮದುವೆ | ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸಗೀತೆ ಮತ್ತು ಕಥೆಗಳನ್ನು ಆಲಿಸುವುದರ ಜೊತೆಗೆ ಅರ್ಥ ಮಾಡಿಕೊಳ್ಳುವರು. | ಪ್ರಾಣಿಯ ಚಿತ್ರಗಳು | ಶಿಕ್ಷಕರು | **ಪೂ. ಸಿ. ಚ.:**"ಅಮ್ಮಾ ಅಮ್ಮಾ ಒಂದೇ ಒಂದು ಉಂಡೆ ಕೊಡ್ತಿಯಾ" ಎಂಬ ಅಭಿನಯ ಗೀತೆಯನ್ನು ಹಾಡಿಸುವರು. | ಕನ್ನಡ – ಅಟ್ಟೆಯ ಮುಟ್ಟಿನ ಜೋಡಿ | ಭಾಷೆಯಲ್ಲಿನ ಎಲ್ಲಾ ಸ್ವರಗಳನ್ನು ಉಚ್ಚರಿಸುವುದು. ಮತ್ತು ವಿರಳವಾಗಿ ಉಪಯೋಗಿಸುವ ಅಕ್ಷರ ಮತ್ತು ಸಂಯುಕ್ತಾಕ್ಷರಗಳನ್ನು ಗುರ್ತಿಸುವುದು. | ಕಪ್ಪು ಹಲಗೆಯ ಬರಹ | ಶಿಕ್ಷಕರು | **ಪೂ. ಸಿ. ಚ.:**"<br>1 ನೇ ತರಗತಿಯವರೊಂದಿಗೆ ಪಾಲ್ಗೊಳ್ಳುವರು.<br>ಮಕ್ಕಳಿಗೆ ಅಗತ್ಯ ಸೂಚನೆಗಳನ್ನು ನೀಡುವರು. | - | - | - | - | |
| | 30ನಿ | | | | ಶಿಕ್ಷಕರು | "ಸಣ್ಣಿ ಮದುವೆ" ಪದ್ಯದ ಮುಂದುವರೆದ ಸಾಲುಗಳನ್ನು ರಾಗವಾಗಿ ಅಭಿನಯ ಸಹಿತವಾಗಿ ಹೇಳಿಕೊಡುವರು.<br>"ಕಪ್ಪೆ ಕರ ಕರ ತುಪ್ಪ ಜಲಿ ಜಲಿ" | | | | ಹಿರೇಮಣಿ | ಕಪ್ಪು ಹಲಗೆಯಲ್ಲಿ ಬರೆದ ವಿಜಾತೀಯ ಸಂಯುಕ್ತಾಕ್ಷರಗಳ ವಾಕ್ಯಗಳನ್ನು ಹೇಳಿಕೊಡುವರು.<br>ಮಕ್ಕಳು ಓದುವಿಕೆಯನ್ನು ಅಭ್ಯಾಸ ಮಾಡುವರು. | | | | - | – **3** & **4** **ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ.** – |
| | 10ನಿ | | | ಪ್ರಾಣಿಯ ಚಿತ್ರಗಳು | ಶಿಕ್ಷಕರು | ಮಕ್ಕಳಿಗೆ ಮುಂದಿನ ಚಟುವಟಿಕೆಯ ಬಗ್ಗೆ ಸೂಚನೆಯನ್ನು ನೀಡುವರು. | | ಸಂಯುಕ್ತಾಕ್ಷರ ಪದ ಮತ್ತು ವಾಕ್ಯಗಳನ್ನು ಶೈಲಿ ಮಾಡುತ್ತಾರೆ | ವಿಜಾತೀಯ ಸಂಯುಕ್ತಾಕ್ಷರಗಳ ಮಿಂಚು ಪಟ್ಟಿಗಳು | ಶಿಕ್ಷಕರು | ಮಕ್ಕಳ ಓದುವಿಕೆಯನ್ನು ಪರಿಶೀಲಿಸುವರು. | - | - | - | - | |
| | 30ನಿ | | | | ಹಿರೇಮಣಿ | "ಸಣ್ಣಿ ಮದುವೆ" ಪದ್ಯವನ್ನು ಹಿರೇಮಣಿಯು ರಾಗವಾಗಿ ಮಕ್ಕಳಿಗೆ ಹೇಳಿಕೊಡುವನು<br>ಮಕ್ಕಳು ಸಾಮೂಹಿಕವಾಗಿ ಹಾಡಿ ಕಲಿಯುವರು. | | | | ಶಿಕ್ಷಕರು | ವಿಜಾತೀಯ ಸಂಯುಕ್ತಾಕ್ಷರಗಳ ವಾಕ್ಯಗಳ ಮಿಂಚುಪಟ್ಟಿಗಳ ಪ್ರತಿ ಮಗುವಿನಿಂದಲೂ ಓದಿಸುವರು.<br>ಉದಾ :– "ಪಠ್ಯ ಪುಸ್ತಕವನ್ನು ಚೆನ್ನಾಗಿ ಅಭ್ಯಾಸ ಮಾಡಬೇಕು"<br>ಇದೇ ರೀತಿ ಮಾದರಿ ವಾಕ್ಯಗಳನ್ನು ಕಾಗುಣಿತಕ್ಕನುಗುಣವಾಗಿ ಓದಿಸುವರು. | | | | - | – **3** & **4** **ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ.** – |
| 2ನೇ ಅವಧಿ | 10ನಿ | ಗಣಿತ – ಸಂಖ್ಯೆಗಳು | 1 ರಿಂದ 9 ರವರೆಗಿನ ಸಂಖ್ಯೆಗಳನ್ನು ಬಳಸಿ ಏರಿಕೆ ಇಳಿಕೆ ಕ್ರಮಗಳಲ್ಲಿ ಬರೆಯುವರು. | ಅಂಕಿಗಳ ಮಿಂಚು ಪಟ್ಟಿಗಳು | ಶಿಕ್ಷಕರು | **ಪೂ. ಸಿ. ಚ.:**<br>ಎರಡನೇ ತರಗತಿಯವರೊಂದಿಗೆ ಭಾಗವಹಿಸುವರು. | ಗಣಿತ – ಸಂಕಲನ | ಮೊತ್ತ 99 ಕ್ಕೆ ಮೀರದಂತೆ ಎರಡು ಅಂಕಿಯ ಮೂರು ಸಂಖ್ಯೆಗಳ ಸಂಕಲನ ಮಾಡುವರು. | ಅಭ್ಯಾಸ ಪುಸ್ತಕ | ಶಿಕ್ಷಕರು | "ಒಂದು ಒಂದು ಎರಡು ಬಾಳೆಲೆ ಹರಡು ಎರಡು ಎರಡು ನಾಲ್ಕು ನಾಲ್ಕು ಅನ್ನ ಹಾಕು" ಹಾಡು ಹೇಳಿಕೊಡುವರು. | - | - | - | - | |
| | 30ನಿ | | | | ಶಿಕ್ಷಕರು | ಶಿಕ್ಷಕರು ಮಕ್ಕಳನ್ನು ಒಬ್ಬರ ಪಕ್ಕದಲ್ಲಿ ಒಬ್ಬರಂತೆ ಸಾಲಿನಲ್ಲಿ ನಿಲ್ಲಿಸಿ ಅವರಿಗೆ ಮಿಂಚುಪಟ್ಟಿಗಳನ್ನು ಕೊಟ್ಟು (1–9) ಮೊದಲನೆಯವರು ಯಾರು ? ಕೊನೆಯವರು ಯಾರು ? ಎಂದು ಮುಂತಾಗಿ ಪ್ರಶ್ನಿಸಿ ಉತ್ತರ ಪಡೆಯುವರು.<br>ಹಲವಾರು ವಸ್ತುಗಳನ್ನು ಜೋಡಿಸಿ ಅವುಗಳಲ್ಲಿರುವ ವಸ್ತುಗಳು ಎಷ್ಟನೇಯವು ಎಂದು ಪ್ರಶ್ನಿಸಿ ಉತ್ತರ ಪಡೆಯುವರು. | | | | ಹಿರೇಮಣಿ | ಶಿಕ್ಷಕರು ಹಿರೇಮಣಿಯ ಸಹಾಯದಿಂದ ಪುಟ ಸಂಖ್ಯೆ 69 ರ ಲೆಕ್ಕಗಳನ್ನು ಮಾಡಲು ಸೂಚಿಸುವರು.<br>ಮಕ್ಕಳು ಹಿರೇಮಣಿಯ ಸಹಾಯದಿಂದ ಲೆಕ್ಕಗಳನ್ನು ಅಭ್ಯಾಸ ಮಾಡಿಸುವರು. | | | | - | – **3** & **4** **ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ.** – |
| | 10ನಿ | ಲಲಿತ ಕಲೆ – ಬಣ್ಣದ ಕಡ್ಡಿಗಳಿಂದ ಆಕೃತಿ, ಚಿತ್ರಗಳ ರಚನೆ | ಬಣ್ಣದ ಕಡ್ಡಿಗಳು ತಮ್ಮ ಕಲ್ಪನೆಗೆ ನಿಲುಕುವ ವಿವಿಧ ಆಕೃತಿ/ಚಿತ್ರಗಳ ತಯಾರಿಕೆ | ಬಣ್ಣದ ಕಡ್ಡಿಗಳು ಡ್ರಾಯಿಂಗ್ ಹಾಳೆ | ಶಿಕ್ಷಕರು | ಸರಳ ಚಿತ್ರಗಳನ್ನು ಬರೆಯಲು ಸೂಚಿಸುವರು. | | | ಹತ್ತರ ಕಟ್ಟುಗಳು ಮತ್ತು ಬಿಡಿಗಳು | ಶಿಕ್ಷಕರು | ಮಕ್ಕಳು ಕಲಿಕೆಗೆ ಸಿದ್ಧಗೊಳ್ಳುವರು. | - | - | - | - | |
| | 30ನಿ | | | | ಹಿರೇಮಣಿ | ಈ ಮೇಲಿನಂತೆ ತಮಗೆ ಇಷ್ಟವಾದ ಚಿತ್ರಗಳನ್ನು ರಚಿಸುವಂತೆ ಮಕ್ಕಳಿಗೆ ಸೂಚನೆ ನೀಡುವರು.<br>(ಅವಶ್ಯಕವಿದ್ದಲ್ಲಿ ಡ್ರಾಯಿಂಗ್ ಹಾಳೆಗಳ ಮೇಲೆ ಅಂಟಿಸಬಹುದು.) | | | | ಶಿಕ್ಷಕರು | ಶಿಕ್ಷಕರು ಮಕ್ಕಳನ್ನು ಗುಂಪುಗಳಲ್ಲಿ ಕೂಡಿಸಿ ಹತ್ತರ ಕಟ್ಟು ಮತ್ತು ಬಿಡಿಗಳನ್ನು ಬಳಸಿಕೊಂಡು ಪುಟ ಸಂಖ್ಯೆ 71 ಮತ್ತು 72 ಬಳಸಿ ಸಂಕಲನ ಮಾಡಿಸುವರು. ಶಿಕ್ಷಕರು ಪರಿಶೀಲಿಸುವರು. | | | | - | – **3** & **4** **ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ.** – |

| ಅವಧಿ | ಸಮಯ ಪಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| 3ನೇ ಅವಧಿ | 10ನಿ | ಜೀವನ ವಿಜ್ಞಾನ – ಕಣ್ಣಿನ ಆರೋಗ್ಯ | ಕಣ್ಣಿನ ರಕ್ಷಣೆಯ ವಿಧಾನವನ್ನು ಅರಿಯುವುದು. | – | ಶಿಕ್ಷಕರು | **ಪೂ. ಸಿ. ಚ.:** 'ಬೇಟೆಗಾರ' ಕವನವನ್ನು ಮಕ್ಕಳಿಂದ ಸಾಮೂಹಿಕವಾಗಿ ಅಭಿನಯದೊಂದಿಗೆ ಹಾಡಿಸುವರು. | ಜೀವನ ವಿಜ್ಞಾನ – ಕಣ್ಣಿನ ಆರೋಗ್ಯ | ಕಣ್ಣಿನ ರಕ್ಷಣೆಯ ವಿಧಾನವನ್ನು ಅರಿಯುವರು | – | ಶಿಕ್ಷಕರು | **ಪೂ. ಸಿ. ಚ.:** 1 ನೇ ತರಗತಿಯವರೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | ಕನ್ನಡ – ಮಲೆನಾಡ ಸಿರಿ – ಜಲಪಾತ | * ಸನ್ನಿವೇಶಗಳನ್ನು ಅರ್ಥ ಮಾಡಿಕೊಳ್ಳುವುದು. * ಸನ್ನಿವೇಶಗಳನ್ನು ವಿವರಿಸುವುದು * ಲೇಖನ ಚಿಹ್ನೆಗಳನ್ನು ವಾಕ್ಯಗಳಲ್ಲಿ ಬಳಸುವುದು | ಸಂಭಾಷಣೆಯ ಕಾರ್ಡ್‌ಗಳು | ಶಿಕ್ಷಕರು | **ಪೂ. ಸಿ. ಚ.:** "ಮಲೆನಾಡಿನ ಈ ಸೊಬಗಿನ ಐಸಿರಿ" ಎಂಬ ಹಾಡಿನ ಧ್ವನಿ ಸುರುಳಿ ಕೇಳಿಸುವರು. |
| | 30ನಿ | | | | ಹಿರೇಮಣಿ | ಹಿಂದಿನ ಅವಧಿಯಲ್ಲಿ ಕಣ್ಣಿನ ರಕ್ಷಣೆಯ ಬಗ್ಗೆ ಚರ್ಚಿಸಿದ ಅಂತಗಳನ್ನು ಪುನರ್ಮನನ ಮಾಡಿಕೊಂಡು ಮಕ್ಕಳಿಂದ ತಮ್ಮದೇ ವಾಕ್ಯಗಳಲ್ಲಿ ಹೇಳಿಸುವುದು.<br>ಮಕ್ಕಳು ಹೇಳಿದ ಅಂಶಗಳನ್ನು 2 ನೇ ತರಗತಿಯ ಮಕ್ಕಳಿಂದ ಕಪ್ಪು ಹಲಗೆಯ ಮೇಲೆ ಬರೆಸುವರು. | | | | ಹಿರೇಮಣಿ | 2 ನೇ ತರಗತಿಯ ಮಕ್ಕಳು (1 & 2 ನೇ ತರಗತಿ) ಒಟ್ಟಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | | | | ಶಿಕ್ಷಕರು | "ಮಲೆನಾಡ ಸಿರಿ" ಪಾಠದ ಶಿಕ್ಷಕ/ಮಕ್ಕಳ ಸಂಭಾಷಣೆಗಳನ್ನು ಮಕ್ಕಳಿಂದ ಹೇಳಿಸುವರು.<br>ಈ ಮೂಲಕ ಮಕ್ಕಳಿಗೆ ಪಠ್ಯ ವಿಷಯವನ್ನು ಪುನರ್ಬಲನ ಮಾಡುವರು. |
| | 10ನಿ | ಸಾ.ಉ.ಉ.ಕಾ. – ಕಾಗದದ ತೋರಣ ತಯಾರಿಕೆ ಮುಂದುವರಿದುದು | ನಿರುಪಯುಕ್ತ ವಸುಗಳನ್ನು ಬಳಸಿ ತಮ್ಮ ಸುತ್ತಮುತ್ತಲಿನ ಪರಿಸರವನ್ನು ಅಲಂಕರಿಸುವುದು. | ಹಾಡು | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಪ್ರಾರಂಭಿಸಲಾದ ಕಾಗದದ ತೋರಣಗಳ ತಯಾರಿಕಾ ಕಾರ್ಯ ಮುಂದುವರಿಸಲು ಸೂಚನೆ ನೀಡುವರು. | ಸಾ.ಉ.ಉ.ಕಾ. – ಕಾಗದದ ತೋರಣ ತಯಾರಿಕೆ | ನಿರುಪಯುಕ್ತ ವಸುಗಳನ್ನು ಬಳಸಿಕೊಂಡು ತಮ್ಮ ಪರಿಸರವನ್ನು ಅಲಂಕಾರ ಮಾಡುವುದು. | ಅಭಿನಯ ಹಾಡು | ಶಿಕ್ಷಕರು | 1 ನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | ವಿಜ್ಞಾನ – ಪೃಥ್ವಿಯ ಭೂ ಸ್ವರೂಪಗಳು | ಶಿಲೆಗಳ ವಿಧಗಳು | ಶಿಲೆಗಳ ಮಾದರಿಗಳು (ತುಂಡುಗಳು) ಚಿತ್ರಗಳು ಜ್ವಾಲಾಮುಖಿಯ ಚಿತ್ರ | ಶಿಕ್ಷಕರು | ಕಲಿತ ವಿಷಯದ ಬಗ್ಗೆ ಸರಳ ಪ್ರಶ್ನೆಗಳನ್ನು ಕೇಳುವರು. |
| | 30ನಿ | | | | ಹಿರೇಮಣಿ | ಮಕ್ಕಳು ತೋರಣ ತಯಾರಿಸುವರು. ನಂತರ 5 ನೇ ತರಗತಿಯ ಆಯ್ದ ವಿದ್ಯಾರ್ಥಿಗಳಿಂದ ತೋರಣಗಳನ್ನು ಎಲ್ಲಾ ತರಗತಿಯ ಬಾಗಿಲುಗಳಿಗೆ ಕಟ್ಟಿಸುವರು. | | | | ಹಿರೇಮಣಿ | – | | | | ಶಿಕ್ಷಕರು | ಜ್ವಾಲಾಮುಖಿಯಿಂದ ಅಗ್ನಿ ಶಿಲೆಗಳು ಉಂಟಾಗುವ ವಿಧಾನವನ್ನು ಚಿತ್ರದ ಮೂಲಕ ವಿವರಿಸುವರು.<br>ಕಣಶಿಲೆ ಮತ್ತು ರೂಪಾಂತರ ಶಿಲೆಗಳು ಉಂಟಾಗುವ ವಿಧಾನದ ಬಗ್ಗೆ ತಿಳಿಸುವರು. ಲಭ್ಯವಿರುವ ಶಿಲೆಗಳ ಚೂರು ಅಥವಾ ಚಿತ್ರಗಳನ್ನು ಮಕ್ಕಳಿಗೆ ತೋರಿಸುವರು. |
| 4ನೇ ಅವಧಿ | 10ನಿ | ಪರಿಸರ ಅಧ್ಯಯನ – ನಮ್ಮ ದೇಹ | ದೇಹದ ಮುಖ್ಯ ಭಾಗಗಳನ್ನು ಗುರುತಿಸುವರು | ಸರಳ ಚಟುವಟಿಕೆಗಳು | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :–** "ಕೆಲಸಕ್ಕೆ ಬಾರೆ ಮಲ್ಲಕ್ಕ" ಎಂಬ ಅಭಿನಯದ ಹಾಡನ್ನು ಹೇಳಿಸಿ ಅಭಿನಯ ಮಾಡಿಸುವರು. | ಪರಿಸರ ಅಧ್ಯಯನ – ನಮ್ಮ ಸುತ್ತಮುತ್ತ | ಮನುಷ್ಯ ಮತ್ತು ಪರಿಸರದ ಪರಸ್ಪರ ಸಂಬಂಧಗಳನ್ನು ಅರಿಯುವರು. | ಪಠ್ಯ ಪುಸ್ತಕ ಚಿತ್ರ – 1 | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :–** ಹಿಂದಿನ ಅವಧಿಯಲ್ಲಿ ಹೇಳಿಕೊಟ್ಟಂತಹ ಅಭಿನಯ ಗೀತೆಯನ್ನು ಹೇಳಿಕೊಡುವರು | ಸಮಾಜ – ವೇದಗಳ ಕಾಲ | ವೇದಗಳ ಬಗ್ಗೆ ತಿಳಿಯುವುದು ಅಂದಿನ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಅರಿಯುವುದು. | ಪ್ರಶ್ನೆಗಳು, ಸಂಗ್ರಹಿತ ಲೇಖನಗಳು | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಬೋಧಿಸಲಾದ ವಿಷಯಗಳ ಬಗ್ಗೆ ಚರ್ಚಿಸುವರು. |
| | 30ನಿ | | | | ಹಿರೇಮಣಿ | ಶಿಕ್ಷಕರು ಮಕ್ಕಳಿಗೆ ಕೆಲವು ಚಟುವಟಿಕೆಗಳನ್ನು ಮಾಡಲು ಸೂಚನೆಯನ್ನು ನೀಡುವರು.<br>ಉದಾ :– ಹಾಡನ್ನು ಕೇಳು, ತಲೆಯನ್ನು ಬಗ್ಗಿಸು, ಪಕ್ಕಕ್ಕೆ ತಲೆಯನ್ನು ನಿಧಾನವಾಗಿ ತಿರುಗಿಸು, ನಿಂತಲ್ಲೆ ಓಡು ವೇಗವಾಗಿ ನಡೆಯುವುದು ಇತ್ಯಾದಿ. | | | | ಹಿರೇಮಣಿ | ಶಿಕ್ಷಕರು ಮಕ್ಕಳಿಗೆ ಪಠ್ಯಪುಸ್ತಕ ಚಟುವಟಿಕೆ ಮಾಡುವಂತೆ ಸೂಚನೆಗಳನ್ನು ನೀಡುವರು.<br>**ಪುನರ್ಬಲನ ಚಟುವಟಿಕೆ :–**<br>ಪಠ್ಯ ಪುಸ್ತಕದ ಪುಟ ಸಂಖ್ಯೆ 19 ರಲ್ಲಿ ಇರುವ ಚಿತ್ರಪಟ – 1 ನ್ನು ವೀಕ್ಷಿಸಲು ಹೇಳಿ ನಡೆಯುವ ಕೆಲಸಗಳನ್ನು ಪಟ್ಟಿ ಮಾಡಲು ತಿಳಿಸುವರು. (ಹಿರೇಮಣಿ ಸಹಾಯದಿಂದ)<br>ಕೆರೆ, ಬಟ್ಟೆ ಒಗೆಯುತ್ತಿದ್ದಾರೆ ದನಗಳನ್ನು ತೊಳೆಯುತ್ತಿದ್ದಾರೆ ಇತ್ಯಾದಿ. | | | | ಶಿಕ್ಷಕರು | 'ಉತ್ತರ ವೇದಕಾಲದ' ಸಮಾಜದಲ್ಲಿ ಮಹಿಳೆಯರ ಬದಲಾದ ಸ್ಥಾನಮಾನಗಳನ್ನು ವಿವರಿಸುವರು.<br>ಗಾರ್ಗಿ, ಮೈತ್ರೇಯಿ ಮುಂತಾದ ಮಹಿಳಾ ಕವಯಿತ್ರಿಯರ ಬಗ್ಗೆ ವಿಷಯ ಸಂಗ್ರಹಿಸಿ ತಿಳಿಸುವರು.<br>ಆರ್ಥಿಕ ಹಾಗೂ ಧಾರ್ಮಿಕ ಪರಿಸ್ಥಿತಿಗಳ ಬಗ್ಗೆಯೂ ಮಕ್ಕಳಿಗೆ ವಿವರಣೆ ನೀಡುವರು. |
| | 10ನಿ | ಸಾ.ಉ.ಉ.ಕಾ. – ರೇಖಾ ಚಿತ್ರಗಳ ಮೇಲೆ ಸ್ಟಿಕರ್ ಅಂಟಿಸುವುದು. | ವಿವಿಧ ಆಕೃತಿಗಳಿಗೆ ಅನುಗುಣವಾಗಿ ವಸ್ತುಗಳನ್ನು ಅಂಟಿಸುವುದನ್ನು ಅರಿಯುವರು. | ರೇಖಾ ಚಿತ್ರ ಒಳಗೊಂಡ ಹಾಳೆಗಳು – ಸ್ಟಿಕ್ಕರ್‌ಗಳು | ಶಿಕ್ಷಕರು | ಶಿಕ್ಷಕರ ಸೂಚನೆಯಂತೆ ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸುವರು. | | ಸ್ಥಳೀಯ ಪರಿಸರಗಳ ಬಗ್ಗೆ ಮಾಹಿತಿ ಪಡೆಯುವರು. | ಸ್ವಚ್ಛತೆಯ ಚಿತ್ರಪಟ | ಶಿಕ್ಷಕರು | ಮಕ್ಕಳು ಕಲಿಕೆಗೆ ಅಣಿಯಾಗುವರು. | ಜೀವನ ವಿಜ್ಞಾನ – ಆರೋಗ್ಯ ಶಿಕ್ಷಣ | * ಉತ್ತಮ ಆರೋಗ್ಯದ ಅಭ್ಯಾಸಗಳನ್ನು ಅರಿಯುವರು. | ಆರೋಗ್ಯದ ಅಭ್ಯಾಸಗಳನ್ನು ತೋರಿಸುವ ಚಾರ್ಟ್ | ಶಿಕ್ಷಕರು | ಉತ್ತಮ ಆರೋಗ್ಯದ ಅಭ್ಯಾಸಗಳನ್ನು ತೋರಿಸುವ ಚಾರ್ಟ್‌ನ್ನು ತರಗತಿಯ ಗೋಡೆಗೆ ನೇತುಹಾಕಿ ಒಬ್ಬೊಬ್ಬರಾಗಿ ಅದನ್ನು ಓದುವಂತೆ ಮತ್ತು ಅದರಂತೆ ಅಭಿನಯ ಮಾಡುವಂತೆ ಚಟುವಟಿಕೆಯನ್ನು ಹಿರೇಮಣಿಯ ನೇತೃತ್ವದಲ್ಲಿ ಮಾಡಲು ಸೂಚಿಸುವರು. |
| | 30ನಿ | | | | ಹಿರೇಮಣಿ | ಮಕ್ಕಳಿಗೆ ರೇಖಾ ಚಿತ್ರಗಳಿರುವ ಹಾಳೆಗಳು ಹಾಗೂ ಸ್ಟಿಕ್ಕರ್‌ಗಳನ್ನು ವಿತರಿಸಿ, ಹಿರೇಮಣಿಯ ನೇತೃತ್ವದಲ್ಲಿ ಅವುಗಳನ್ನು ರೇಖಾಕೃತಿಗಳ ಮೇಲೆ ಅಂಟಿಸುವಂತೆ ಶಿಕ್ಷಕರು ಸೂಚನೆ ನೀಡುವರು.<br>ಮಕ್ಕಳು ಚಟುವಟಿಕೆಯಲ್ಲಿ ತೊಡಗುವರು. | | | | ಶಿಕ್ಷಕರು | ಶಿಕ್ಷಕರು ಮಕ್ಕಳು ಮಾಡಿದ ಪಟ್ಟಿಯನ್ನು ವೀಕ್ಷಿಸುವರು. ನಂತರ ನೀರಿನ ಉಪಯೋಗ ತಿಳಿಸಿ ನೀರನ್ನು ಸ್ವಚ್ಛವಾಗಿಟ್ಟು ಕೊಳ್ಳಬೇಕು ಎಂಬ ಸಂಗತಿ ತಿಳಿಸುವರು.<br>(ಒಟ್ಟಾರೆ ಪ್ರತಿಯೊಂದು ವಸ್ತು ಹಾಗೂ ಪರಿಸರವನ್ನು ಸ್ವಚ್ಛವಾಗಿಡಲು ತಿಳಿಸುವರು.) | | | | ಹಿರೇಮಣಿ | ಮಕ್ಕಳು ಶಿಕ್ಷಕರ ಸೂಚನೆಯನ್ನು ಅನುಸರಿಸುವರು. |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ವಿವರ | ಬಳಸಬಹುದಾದ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ವಿವರ | ಬಳಸಬಹುದಾದ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ವಿವರ | ಬಳಸಬಹುದಾದ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| 1ನೇ ಅವಧಿ | 10ನಿ | ಕನ್ನಡ – ಸಣ್ಣ ಮದುವೆ | ಸರಳ ಹಾಗೂ ಒತ್ತಕ್ಷರಯುಕ್ತ ಪದ್ಯ, ಪ್ರಾಸಗೀತೆ ಮತ್ತು ಕಥೆಗಳನ್ನು ಆಲಿಸುವರು ಜೊತೆಗೆ ಅರ್ಥ ಮಾಡಿಕೊಳ್ಳುವರು. | ಪದಗಳ ಪಟ್ಟಿ | ಶಿಕ್ಷಕರು | **ಪೂ. ಸಿ. ಚ :–**<br>**"ತೋಟಕ್ಕೆ ಹೋಗೋ ತಿಮ್ಮ ತೋಳ ಬಂದಿತಮ್ಮ"** ಎಂಬ ಅಭಿನಯ ಗೀತೆಯನ್ನು ಹಾಡಿಸುವರು.<br>ಮಕ್ಕಳಿಗೆ ಪದಗಳನ್ನು ಓದಿ ನಕಲು ಮಾಡಲು ಸೂಚಿಸುವರು. | ಕನ್ನಡ – ಲಚ್ಚಿಯ ಮೆಚ್ಚಿನ ದೋಣಿ | ಪಾಠದಲ್ಲಿನ ಎಲ್ಲಾ ಸ್ವರಗಳನ್ನು ಉಚ್ಛರಿಸುವರು. ಎರಡಾಗಿ ಉಪಯೋಗಿಸುವ ಅಕ್ಷರ ಮತ್ತು ಸಂಯುಕ್ತಾಕ್ಷರಗಳನ್ನು ಗುರ್ತಿಸುವರು. | – | ಶಿಕ್ಷಕರು | **ಪೂ.ಸಿ.ಚ.**<br>1 ನೇ ತರಗತಿಯವರೊಂದಿಗೆ ಅಭಿನಯ ಗೀತೆಯಲ್ಲಿ ಪಾಲ್ಗೊಳ್ಳುವರು. | – | – | – | – | |
| | 30ನಿ | | | | ಹಿರೇಮಣಿ | ಉದಾಹರಣೆ :–<br>ಅರಸ, ದಸರ, ಸಡಗರ, ಗರಗಸ, ಅರ, ದರ, ಸರ, ಗರ ಎಂಬ ಪದಗಳನ್ನು ಅಂದವಾಗಿ ನಕಲು ಮಾಡುವರು. | | | | ಶಿಕ್ಷಕರು | ಪಠ್ಯ ಪುಸ್ತಕದಲ್ಲಿರುವ "ಲಚ್ಚಿಯ ಮೆಚ್ಚಿನ ದೋಣಿ" ಎಂಬ ಪಾಠವನ್ನು ಸ್ಪಷ್ಟವಾಗಿ ಉಚ್ಚಾರಣೆ ಮಾಡುತ್ತಾ ಓದುವರು.<br>ನಂತರ ಮಕ್ಕಳಿಗೆ ವಾಕ್ಯಗಳನ್ನು ಹೇಳಿ ಕೊಡುವರು.<br>ಪಾಠ ಓದುವ ಕ್ರಮ ಕಲಿಸುವರು.<br>ಅರ್ಥ ವಿವರಣೆ ನೀಡುವರು. | | | | – | – **3 & 4** ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 10ನಿ | | | ಸಣ್ಣ ಮದುವೆ ಪದ್ಯ ಚಿತ್ರಗಳು | ಶಿಕ್ಷಕರು | ಮಕ್ಕಳ ಬರವಣಿಗೆಯನ್ನು ಪರಿಶೀಲಿಸುವರು. | | ಸಂಯುಕ್ತಾಕ್ಷರ ಪದ ಮತ್ತು ವಾಕ್ಯಗಳನ್ನು ಸ್ಪಷ್ಟ ಓದುವರು | ಪಠ್ಯ ಪುಸ್ತಕ ಹಾಳೆ | ಶಿಕ್ಷಕರು | ಶಿಕ್ಷಕರು ಪಾಠ ಓದಲು ಮಕ್ಕಳಿಗೆ ಅಗತ್ಯ ಸೂಚನೆಗಳನ್ನು ನೀಡುವರು. | – | – | – | – | |
| | 30ನಿ | | | | ಶಿಕ್ಷಕರು | "ಸಣ್ಣ ಮದುವೆ" ಪದ್ಯವನ್ನು ಪೂರ್ತಿಯಾಗಿ, ರಾಗವಾಗಿ ಹಾವಭಾವದೊಂದಿಗೆ ಅಭಿನಯ ಸಹಿತವಾಗಿ ಹೇಳಿಕೊಡುವರು.<br>ಮಕ್ಕಳು ಶಿಕ್ಷಕರೊಂದಿಗೆ ಹಾಡುವರು. | | | | ಹಿರೇಮಣಿ | ಹಿರೇಮಣಿಯು ಮಕ್ಕಳಿಂದ ಪಾಠವನ್ನು ಓದಿಸುವನು.<br>ಮಕ್ಕಳು ಪಾಠವನ್ನು ಓದುವುದನ್ನು ಅಭ್ಯಾಸ ಮಾಡುವರು. | | | | – | – **3 & 4** ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| 2ನೇ ಅವಧಿ | 10ನಿ | ಗಣಿತ – ಸಂಖ್ಯೆಗಳು | 1 ರಿಂದ 9 ರವರೆಗಿನ ಸಂಖ್ಯೆಗಳನ್ನು ಏರಿಕೆ – ಇಳಿಕೆ ಕ್ರಮದಲ್ಲಿ ಬರೆಯುವರು. | ಅಭ್ಯಾಸ ಪುಸ್ತಕ | ಶಿಕ್ಷಕರು | **ಪೂ. ಸಿ. ಚ.:**<br>2ನೇ ತರಗತಿಯವರೊಂದಿಗೆ ಹಾಡುವರು.<br>ಶಿಕ್ಷಕರು ಅಭ್ಯಾಸ ಪುಸ್ತಕದಲ್ಲಿ ಅಭ್ಯಾಸ ಮಾಡಲು ಸೂಚನೆಗಳನ್ನು ನೀಡುವರು. | ಗಣಿತ – ಸಂಕಲನ | ಮೊತ್ತ 99 ಕ್ಕೆ ಮೀರದಂತೆ ಎರಡು ಅಂಕಿಯ ಸಂಖ್ಯೆಗಳ ಸಂಕಲನ ಮಾಡುವರು. | ಹತ್ತರ ಕಟ್ಟುಗಳು ಮತ್ತು ಬಿಡಿಗಳು | ಶಿಕ್ಷಕರು | **ಪೂ.ಸಿ.ಚ.**<br>"ಒಂದು ಎರಡು ಬಾಳೆಲೆ ಹರಡು ಮೂರು ನಾಲ್ಕು ಅನ್ನ ಹಾಕು" ಹಾಡು ಹೇಳಿಕೊಡುವರು.<br>ಶಿಕ್ಷಕರು ಸೂಚನೆಗಳನ್ನು ನೀಡುವರು. | – | – | – | – | |
| | 30ನಿ | | | | ಹಿರೇಮಣಿ | ಶಿಕ್ಷಕರು ಮಕ್ಕಳಿಗೆ ಅಭ್ಯಾಸ ಪುಸ್ತಕದ ಪುಟ ಸಂಖ್ಯೆ 51 ಮತ್ತು 52 ನ್ನು ಬಳಸಿ ಅಭ್ಯಾಸ ಮಾಡಲು ಸೂಚಿಸುವರು. | | | | ಶಿಕ್ಷಕರು | ಶಿಕ್ಷಕರು ಹತ್ತರ ಕಟ್ಟುಗಳು ಮತ್ತು ಬಿಡಿಗಳನ್ನು ಉಪಯೋಗಿಸಿಕೊಂಡು ವಿಸ್ತರಿಸಿ ಬರೆದು ಕೂಡುವ ಅಭ್ಯಾಸ ಮಾಡಿಸುವರು.<br>ಉದಾ :– 32 = 3 ಹತ್ತುಗಳು + 2 ಬಿಡಿಗಳು<br>61 = 6 ಹತ್ತುಗಳು + 1 ಬಿಡಿಗಳು<br>93 = 9 ಹತ್ತುಗಳು + 3 ಬಿಡಿಗಳು | | | | – | – **3 & 4** ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 10ನಿ | | | ಗುಂಪು ಚಟುವಟಿಕೆ | ಶಿಕ್ಷಕರು | ಶಿಕ್ಷಕರು ಗುಂಪು ಚಟುವಟಿಕೆಗೆ ಸೂಚನೆಗಳನ್ನು ನೀಡುವರು. | ಲಲಿತ ಕಲೆ – "ಮರಳಿನ ಮೇಲೆ ಚಿತ್ರ ಬಿಡಿಸುವುದು" | ಕೈ ಬೆರಳುಗಳಿಂದ ಮರಳಿನ ಮೇಲೆ ಚಿತ್ರ ಬಿಡಿಸುವರು. | – | ಶಿಕ್ಷಕರು | ಮಕ್ಕಳನ್ನು ಆಟದ ಮೈದಾನಕ್ಕೆ ಕರೆದುಕೊಂಡು ಹೋಗಿ, ವ್ಯವಸ್ಥಿತವಾಗಿ ಮರಳಿನ ಸುತ್ತಲು ಕೂರಿಸಿ ಮರಳಿನ ಮೇಲೆ ತಮ್ಮ ಕಲ್ಪನೆಗೆ ತಕ್ಕಂತೆ ಚಿತ್ರಗಳನ್ನು ಬಿಡಿಸುವಂತೆ ನಿರ್ದೇಶನ ನೀಡುವರು. | – | – | – | – | |
| | 30ನಿ | | | | ಶಿಕ್ಷಕರು | ಶಿಕ್ಷಕರು ಮಕ್ಕಳನ್ನು ಗುಂಪುಗಳಲ್ಲಿ ಕೂರಿಸಿ ಅವರವರ ಹೆಸರುಗಳನ್ನು ಬರೆದು ಅದರಲ್ಲಿ ಮೊದಲನೆಯ ಅಕ್ಷರ 2 ನೆಯ ಅಕ್ಷರ ಮುಂತಾಗಿ ಗುರುತಿಸಲು ಸೂಚಿಸುವರು. | | | | ಹಿರೇಮಣಿ | ಮಕ್ಕಳು ಬೆರಳು/ಕಡ್ಡಿಗಳಿಂದ ಮರಳಿನ ಮೇಲೆ ಚಿತ್ರ ಬಿಡಿಸುವರು. | | | | – | – **3 & 4** ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |

## ಒಂದನೇ ತರಗತಿ

| ಅವಧಿ (1) | ಸಮಯ ಹಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (3) | ಸಾಮರ್ಥ್ಯದ ವಿವರ (4) | ಬಳಸಬಹುದಾದ ಕಲಿಕಾ ಸಾಮಗ್ರಿ (5) | ನಿರ್ವಹಣೆ (6) | ಕಲಿಕಾ ಪ್ರಕ್ರಿಯೆ (7) |
|---|---|---|---|---|---|---|
| 3ನೇ ಅವಧಿ | 10ನಿ | ಜೀವನ ವಿಜ್ಞಾನ | ವೈಯಕ್ತಿಕ ಸ್ವಚ್ಛತೆ ಅರಿಯುವರು. | – | ಶಿಕ್ಷಕರು | ಒಂದು ಮತ್ತು ಎರಡನೆ ತರಗತಿಯ ಮಕ್ಕಳು ಎರಡೂ ಅವಧಿಯಲ್ಲಿ ಜೀವನ ವಿಜ್ಞಾನ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 30ನಿ | | | | ಶಿಕ್ಷಕರು | **ಸೂಚನೆ :–** ಶಿಕ್ಷಕರು ಉಗುರುಗಳ ಸ್ವಚ್ಛತೆಯ ಬಗ್ಗೆ ತಿಳಿಸುವರು. ಉಗುರುಗಳ ಸ್ವಚ್ಛತೆಯನ್ನು ಕಾಪಾಡುವುದರಿಂದ ಆರೋಗ್ಯ ನಿಯಮಗಳನ್ನು ಪಾಲಿಸಲು ಅನುವಾಗುವಂತೆ ತಿಳಿಸುವರು. ಕೈ ಕಾಲು ಮತ್ತು ಮುಖ ಇವುಗಳ ವೈಯುಕ್ತಿಕ ಸ್ವಚ್ಛತೆಯ ಬಗ್ಗೆ ಮಕ್ಕಳಿಗೆ ತಿಳಿಸಿಕೊಡುವರು. ಮಕ್ಕಳು ಸ್ವಚ್ಚತೆಯ ಪ್ರಾಮುಖ್ಯತೆ ಅರಿಯುವರು. |
| | 10ನಿ | ಜೀವನ ವಿಜ್ಞಾನ | ವೈಯಕ್ತಿಕ ಸ್ವಚ್ಛತೆ ಅರಿಯುವರು. | ಹಾಡು | ಶಿಕ್ಷಕರು | – |
| | 30ನಿ | | | | ಹಿರೇಮಣಿ | ಈ ಮೇಲಿನ ಸ್ವಚ್ಚತಾ ಚಟುವಟಿಕೆಯನ್ನು ಹಿರೇಮಣಿಯು ಮುಂದುವರೆಸುವರು, |
| 4ನೇ ಅವಧಿ | 10ನಿ | ಪರಿಸರ ಅಧ್ಯಯನ – ನಮ್ಮ ದೇಹ | ದೇಹದ ಮುಖ್ಯ ಭಾಗಗಳನ್ನು ಗುರುತಿಸುವರು | ನೆರಳು ಚಿತ್ರಗಳು (ಕೈ, ಬೆಳಕು) | ಶಿಕ್ಷಕರು | **ಪೂ. ಸಿ. ಚ :–** ಹಿಂದಿನ ಅವಧಿಯಲ್ಲಿ ಹೇಳಿಕೊಟ್ಟಂತಹ ಹಾಡನ್ನು ಪುನರ್ ಬಲನ ಮಾಡುವರು. |
| | 30ನಿ | | | | ಶಿಕ್ಷಕರು | ಶಿಕ್ಷಕರು ಮಕ್ಕಳಿಗೆ ಕೈ ಬೆರಳುಗಳ ಸಹಾಯದಿಂದ ಕೆಲವು ಚಿತ್ರಗಳು ಗೋಡೆಯ ಮೇಲೆ ಮೂಡಿ ಬರುವಂತೆ ಮಾಡಿತೋರಿಸುವರು. ಮಕ್ಕಳು ಸಂತೋಷದಿಂದ ಈ ಚಟುವಟಿಕೆಯನ್ನು ಗಮನಿಸಿ ಮಾಡಲು ಪ್ರಯತ್ನಿಸುವರು. |
| | 10ನಿ | | | – | ಶಿಕ್ಷಕರು | ಶಿಕ್ಷಕರು ಹಿರೇಮಣಿ ಮತ್ತು ಮಕ್ಕಳಿಗೆ ಸೂಚನೆಯನ್ನು ನೀಡುವರು. |
| | 30ನಿ | | | | ಹಿರೇಮಣಿ | ಮಕ್ಕಳು ತಮ್ಮ ದೇಹದ ಭಾಗಗಳನ್ನು ಗುರುತಿಸಿ ಹೇಳುವರು. |

## ಎರಡನೇ ತರಗತಿ

| ಅವಧಿ (1) | ಸಮಯ ಹಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (8) | ಸಾಮರ್ಥ್ಯದ ವಿವರ (9) | ಬಳಸಬಹುದಾದ ಕಲಿಕಾ ಸಾಮಗ್ರಿ (10) | ನಿರ್ವಹಣೆ (11) | ಕಲಿಕಾ ಪ್ರಕ್ರಿಯೆ (12) |
|---|---|---|---|---|---|---|
| 3ನೇ ಅವಧಿ | 10ನಿ | ಜೀವನ ವಿಜ್ಞಾನ | ವೈಯಕ್ತಿಕ ಸ್ವಚ್ಛತೆಯ ಬಗ್ಗೆ ಅರಿಯುವರು. | – | ಶಿಕ್ಷಕರು | ಒಂದನೆ ತರಗತಿ ಮಕ್ಕಳ ಜೊತೆ ಚಟುವಟಿಕೆಯಲ್ಲಿ 2 ನೇ ತರಗತಿಯ ಮಕ್ಕಳು ಭಾಗವಹಿಸುವರು. |
| | 30ನಿ | | | | ಶಿಕ್ಷಕರು | – |
| | 10ನಿ | ಜೀವನ ವಿಜ್ಞಾನ | ವೈಯಕ್ತಿಕ ಸ್ವಚ್ಛತೆಯ ಬಗ್ಗೆ ಅರಿಯುವರು. | – | ಶಿಕ್ಷಕರು | ಒಂದನೆ ತರಗತಿ ಮಕ್ಕಳ ಜೊತೆ ಚಟುವಟಿಕೆಯಲ್ಲಿ 2 ನೇ ತರಗತಿಯ ಮಕ್ಕಳು ಭಾಗವಹಿಸುವರು. |
| | 30ನಿ | | | | ಹಿರೇಮಣಿ | – |
| 4ನೇ ಅವಧಿ | 10ನಿ | ಪರಿಸರ ಅಧ್ಯಯನ – ನಮ್ಮ ಸುತ್ತಮುತ್ತ | ಮನುಷ್ಯ ಮತ್ತು ಪರಿಸರದ ಪರಸರ ಸಂಬಂಧಗಳನ್ನು ಅರಿಯುವರು. ಸ್ಥಳೀಯ ಪರಿಸರದ ಬಗ್ಗೆ ಮಾಹಿತಿ ಪಡೆಯುವರು. | ಕಾಡಿನ ಚಿತ್ರಪಟ | ಶಿಕ್ಷಕರು | **ಪೂ. ಸಿ. ಚ. :–** ಹಿಂದಿನ ಅವಧಿಯಲ್ಲಿ ಕಲಿತಂತಹ ಹಾಡನ್ನು ಮತ್ತೊಮ್ಮೆ ಪುನರ್ ಬಲನ ಮಾಡುವರು. ಶಿಕ್ಷಕರು ಮಕ್ಕಳಿಗೆ ಸೂಚನೆಗಳನ್ನು ನೀಡುವರು. |
| | 30ನಿ | | | | ಹಿರೇಮಣಿ | ಕಾಡಿನ ಬಗ್ಗೆ ಮಕ್ಕಳಿಗೆ ತಿಳಿದಿರುವ ಅಂಶಗಳನ್ನು ಚರ್ಚಿಸಲು ತಿಳಿಸಿ ಪಟ್ಟಿ ಮಾಡುವರು. (ಹಿರೇಮಣಿ ಸಹಾಯದಿಂದ) |
| | 10ನಿ | ಸಾ.ಉ.ಉ.ಕಾ. – ಮರಳಿನ ಮೇಲೆ ಚಿತ್ರ ರಚನೆ | ಮರಳಿನ ಮೇಲೆ ಮಕ್ಕಳ ಕಲ್ಪನೆಯ ಚಿತ್ರಗಳನ್ನು ರಚಿಸುವರು. | ಹಾಡು, ಕಡ್ಡಿಗಳು | ಶಿಕ್ಷಕರು | ಶಿಕ್ಷಕರು ಮಕ್ಕಳಿಗೆ ಚಿತ್ರ ಬರೆಯಲು ಸೂಚನೆಯನ್ನು ನೀಡುವರು. |
| | 30ನಿ | | | | ಹಿರೇಮಣಿ | ಮರಳನ್ನು ತಂದು ಹರಡಿ ಅದರ ಮೇಲೆ ಬೆರಳಿನಿಂದ ಅಥವಾ ಕಡ್ಡಿಯಿಂದ ತಮಗೆ ಇಷ್ಟವಾದ ಚಿತ್ರಗಳನ್ನು ರಚಿಸಲು ಹೇಳುವರು. ಉದಾ :– ಎಲೆ, ಹಣ್ಣು ಇತ್ಯಾದಿ. |

## ಐದನೇ ತರಗತಿ

| ಅವಧಿ (1) | ಸಮಯ ಹಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (13) | ಸಾಮರ್ಥ್ಯದ ವಿವರ (14) | ಬಳಸಬಹುದಾದ ಕಲಿಕಾ ಸಾಮಗ್ರಿ (15) | ನಿರ್ವಹಣೆ (16) | ಕಲಿಕಾ ಪ್ರಕ್ರಿಯೆ (17) |
|---|---|---|---|---|---|---|
| 3ನೇ ಅವಧಿ | 10ನಿ | ಕನ್ನಡ – ಮಲೆನಾಡ ಸಿರಿ : ಜಲಪಾತ | * ಸನ್ನಿವೇಶಗಳನ್ನು ಅರ್ಥ ಮಾಡಿಕೊಳ್ಳುವುದು. * ಸನ್ನಿವೇಶಗಳನ್ನು ವಿವರಿಸುವುದು. * ಲೇಖನ ಚಿಹ್ನೆಗಳನ್ನು ವಾಕ್ಯಗಳಲ್ಲಿ ಬಳಸುವುದು. | ಮಾದರಿ ವಾಕ್ಯಗಳ ಪಟ್ಟಿ | ಶಿಕ್ಷಕರು | **ಪೂ. ಸಿ. ಚ :–** ಸರಳ ಕಥೆಗಳನ್ನು ಹೇಳಿಸುವರು. |
| | 30ನಿ | | | | ಹಿರೇಮಣಿ | ಮಕ್ಕಳು ಲೇಖನ ಚಿಹ್ನೆ ಹಾಕುವ ಬಗ್ಗೆ ಸೂಕ್ತ ಸೂಚನೆ ನೀಡುವರು. ಮಕ್ಕಳು ಶಿಕ್ಷಕರು ನೀಡಿದ ಮಾದರಿ ವಾಕ್ಯಗಳಿಗೆ ಸೂಕ್ತ ಲೇಖನ ಚಿಹ್ನೆಗಳನ್ನು ಬಳಸುವ ಅಭ್ಯಾಸ ಮಾಡುವರು. |
| | 10ನಿ | ಮೌ.ಶಿ. – ಕಥೆ : ಇಬ್ಬರ ಜಗಳ ಮೂರನೆಯವನಿಗೆ ಲಾಭ" | “ಪರಸರ ಹೋರಾಟದಿಂದ ಏನು ಸಾಧಿಸಲಾಗದು”ಎಂದು ಅರಿಯುವುದು | ಈಸೋಪನ ನೀತಿ ಕಥೆಗಳು | ಶಿಕ್ಷಕರು | ಮಕ್ಕಳ ಕಾರ್ಯವನ್ನು ಪರಿಶೀಲಿಸುವರು. |
| | 30ನಿ | | | | ಶಿಕ್ಷಕರು | ಮಕ್ಕಳಿಗೆ ಪರಸ್ಪರ ಹೋರಾಟದಿಂದ ಏನನ್ನು ಸಾಧಿಸಲಾಗದು ಎಂಬುದನ್ನು ಸೂಚಿಸಲು “ಇಬ್ಬರ ಜಗಳ ಮೂರನೆಯವನಿಗೆ ಲಾಭ” ಎಂಬ ಕಥೆಯನ್ನು ಹೇಳುವರು. |
| 4ನೇ ಅವಧಿ | 10ನಿ | ಸಮಾಜ ವಿಜ್ಞಾನ – ವೇದಗಳ ಕಾಲ | ವೇದಗಳ ಬಗ್ಗೆ ಅರಿಯುವುದು ಅಂದಿನ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ತಿಳಿಯುವುದು. | ಪ್ರಶ್ನಾವಳಿ ಕಾರ್ಡ್‌ಗಳು | ಶಿಕ್ಷಕರು | ಶಿಕ್ಷಕರು ಮಕ್ಕಳಿಗೆ ಉತ್ತರಗಳನ್ನು ಬರೆಯಲು ಸೂಚಿಸುವರು. |
| | 30ನಿ | | | | ಹಿರೇಮಣಿ | ಮಕ್ಕಳಿಗೆ ಪಾಠದ ಪ್ರಶ್ನೋತ್ತರಗಳನ್ನು ಬರೆದುಕೊಳ್ಳಲು ಸೂಚನೆಗಳನ್ನು ನೀಡುವನು. ಶಿಕ್ಷಕರು ತಯಾರಿಸಿ ಕೊಟ್ಟ ಪ್ರಶ್ನೆ – ಉತ್ತರಗಳ ಟಿಪ್ಪಣಿ ಪುಸ್ತಕದಿಂದ ಪ್ರಶ್ನೋತ್ತರಗಳನ್ನು ಕಪ್ಪು ಹಲಗೆಯ ಮೇಲೆ ಬರೆಯುವರು. ಮಕ್ಕಳು ಅದನ್ನು ತಮ್ಮ ಅಭ್ಯಾಸ ಪುಸ್ತಕಕ್ಕೆ ಅಂದವಾಗಿ ನಕಲು ಮಾಡಿಕೊಳ್ಳುವರು. |
| | 10ನಿ | ವಿಜ್ಞಾನ – ಪೃಥ್ವಿಯ ಭೂ ಸ್ವರೂಪಗಳು | ವಿವಿಧ ಭೂ ಸ್ವರೂಪಗಳ ಬಗ್ಗೆ ತಿಳಿಯುವರು. | ಭೂ ಸ್ವರೂಪಗಳ ದೊಡ್ಡ ಚಿತ್ರಗಳು. | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಕಲಿಸಲಾದ ವಿಷಯದ ಬಗ್ಗೆ ಪ್ರಶ್ನೆಗಳನ್ನು ಕೇಳುವರು. |
| | 30ನಿ | | | | ಶಿಕ್ಷಕರು | ಶಿಕ್ಷಕರು ವಿವಿಧ ಭೂ ಸ್ವರೂಪಗಳ ಚಿತ್ರಗಳನ್ನು ತೋರಿಸಿ ಮಕ್ಕಳ ಜೊತೆ ಚರ್ಚಿಸುವರು. ವಿವರಣೆ ನೀಡುವರು. |

## ಒಂದನೇ ತರಗತಿ

| ಅವಧಿ (1) | ಸಮಯ ಪಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (3) | ಸಾಮರ್ಥ್ಯದ ವಿವರ (4) | ಬಳಸ ಬಹುದಾದ ಕಲಿಕಾ ಸಾಮಗ್ರಿ (5) | ನಿರ್ವಹಣೆ (6) | ಕಲಿಕಾ ಪ್ರಕ್ರಿಯೆ (7) |
|---|---|---|---|---|---|---|
| 1ನೇ ಅವಧಿ | 40ನಿ | ಜೀವ ವಿಜ್ಞಾನ | | | | **– ಸಾಮೂಹಿಕ ಕವಾಯತು –** |
| 2ನೇ ಅವಧಿ | 10ನಿ | ಕನ್ನಡ – ಸಣ್ಣೆ ಮದುವೆ | ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸಗೀತೆ ಮತ್ತು ಕಥೆಗಳನ್ನು ಆಲಿಸುವುದರ ಜೊತೆಗೆ ಅರ್ಥ ಮಾಡಿಕೊಳ್ಳುವರು. | ಧ್ವನಿಸುರುಳಿ | ಶಿಕ್ಷಕರು | "ಅಮ್ಮಾ ಅಮ್ಮಾ ನನ್ನ ತೋಳಿಗೆ ರೆಕ್ಕೆ ಹಚ್ಚು... ಸೊಂಟಕ್ಕೆ ಬೆಳ್ಳಿಯ ಪಟ್ಟಿ ಕಟ್ಟು" ಎಂಬ ಅಭಿನಯ ಗೀತೆಯನ್ನು ಹೇಳಿಸುವರು. |
| | 30ನಿ | | | | ಶಿಕ್ಷಕರು | "ಅಮ್ಮಾ ಅಮ್ಮಾ ನನ್ನ ತೋಳಿಗೆ ರೆಕ್ಕೆ ಹಚ್ಚು' ಈ ಶಿಶು ಗೀತೆಯನ್ನು ಅಭಿನಯ ಸಹಿತವಾಗಿ ಹಾಡಿಸಿ ಅಭ್ಯಾಸ ಮಾಡಿಸುವರು.<br>ಅದರಲ್ಲಿನ ಪ್ರಾಸ ಪದಗಳು–ಸಾಲುಗಳನ್ನು ಗುರ್ತಿಸಲು ಹೇಳುವರು. |
| | 10ನಿ | | ಹೇಳಲಾದ ಪಠ್ಯದಲ್ಲಿನ ಚಿಕ್ಕ ಮಾಹಿತಿಯನ್ನು ನೆನಪಿಸಿಕೊಳ್ಳುವುದು. ಪದಗಳ ಅಂತ್ಯದ ಆಧಾರದಿಂದ ಅವುಗಳ ನಡುವೆ ಇರುವ ಸಮ್ಯತೆ ಅರಿಯುವುದು. | ಶಿಶು ಗೀತೆ | ಶಿಕ್ಷಕರು | ಮಕ್ಕಳಿಗೆ ಅಗತ್ಯ ಸೂಚನೆಗಳನ್ನು ನೀಡುವರು. |
| | 30ನಿ | | | | ಹಿರೇಮಣಿ | ಮಕ್ಕಳು "ಸಣ್ಣೆ ಮದುವೆ" ಮತ್ತು "ಅಮ್ಮಾ ಅಮ್ಮಾ" ಎಂಬ ಶಿಶುಗೀತೆಗಳನ್ನು ಹಾಡಿ ಅಭ್ಯಾಸ ಮಾಡುವರು. |
| 3ನೇ ಅವಧಿ | 30ನಿ | ಸಾ.ಉ.ಉ.ಕಾ. – ಮರಳಿನ ಮೇಲೆ ಚಿತ್ರ ರಚಿಸುವುದು | ಮಕ್ಕಳು ತಮ್ಮ ಕಲನೆಗೆ ಅನುಗುಣವಾದ ಚಿತ್ರಗಳನ್ನು ರಚಿಸುವರು. | ಮರಳು, ಕಡ್ಡಿ | ಶಿಕ್ಷಕರು | **ಪೂ.ಸಿ.ಚ.**<br>"ಅಣ್ಣನು ಮಾಡಿದ ಗಾಳಿಪಟ, ಬಣ್ಣದ ಹಾಳೆಯ ಗಾಳಿಪಟ" ಹಾಡನ್ನು ಹೇಳಿಕೊಡುವರು. |
| | 10ನಿ | | | | ಶಿಕ್ಷಕರು | ಶಿಕ್ಷಕರು ಮರಳನ್ನು ತಂದು ಹರಡಿ ಅದರ ಮೇಲೆ ಕಡ್ಡಿ ಮತ್ತು ಬೆರಳಿನಿಂದ ಚಿತ್ರ ರಚಿಸುವುದನ್ನು ಮಕ್ಕಳಿಗೆ ತೋರಿಸಿಕೊಡುವರು. ನಂತರ ಮಕ್ಕಳಿಂದ ಮಾಡಿಸುವರು. |
| | 10ನಿ | ಲಲಿತ ಕಲೆ | ವಿವಿಧ ರೀತಿಯ ಬಣ್ಣಗಳನ್ನು ಅರಿಯುವುದು ಹಾಗು ಚಿತ್ರ ಬರೆಯುವುದನ್ನು ತಿಳಿಯುವರು | ಬಿಳಿಯ ಹಾಳೆ, ಬಣ್ಣದ ಪೆನ್ಸಿಲ್ | ಶಿಕ್ಷಕರು | ಮಕ್ಕಳು ಎಲೆಯ ಚಿತ್ರ ಬರೆದು ಬಣ್ಣ ಹಾಕುವಂತೆ ಶಿಕ್ಷಕರು ಸೂಚನೆ ನೀಡುವರು.<br>ಉದಾ :– ವಿವಿಧ ರೀತಿಯ ಎಲೆಗಳು. |
| | 30ನಿ | | | | ಹಿರೇಮಣಿ | ಮಕ್ಕಳು ಒಣಗಿದ ಎಲೆಗಳಿಂದ ಎಲೆಗಳ ಚಿತ್ರ ಬರೆಯುವರು. |

## ಎರಡನೇ ತರಗತಿ

| ಅವಧಿ (1) | ಸಮಯ ಪಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (8) | ಸಾಮರ್ಥ್ಯದ ವಿವರ (9) | ಬಳಸ ಬಹುದಾದ ಕಲಿಕಾ ಸಾಮಗ್ರಿ (10) | ನಿರ್ವಹಣೆ (11) | ಕಲಿಕಾ ಪ್ರಕ್ರಿಯೆ (12) |
|---|---|---|---|---|---|---|
| 1ನೇ ಅವಧಿ | 40ನಿ | | | | | **– ಸಾಮೂಹಿಕ ಕವಾಯತು –** |
| 2ನೇ ಅವಧಿ | 10ನಿ | ಕನ್ನಡ – ಲಚ್ಚಿಯ ಮೆಚ್ಚಿನ ದೋಣಿ | ಭಾಷೆಯಲ್ಲಿನ ಎಲ್ಲಾ ಸ್ವರಗಳನ್ನು ಉಚ್ಚರಿಸುವುದು. ವಿರಳವಾಗಿ ಉಪಯೋಗಿಸುವ ಅಕ್ಷರ ಮತ್ತು ಸಂಯುಕ್ತಾಕ್ಷರಗಳನ್ನು ಗುರ್ತಿಸುವುದು. | ಪಠ್ಯ ಪುಸ್ತಕ | ಶಿಕ್ಷಕರು | **ಪೂ.ಸಿ.ಚ. :**<br>1 ನೇ ತರಗತಿಯವರೊಂದಿಗೆ ಅಭಿನಯ ಗೀತೆಯಲ್ಲಿ ಪಾಲ್ಗೊಳ್ಳುವರು.<br>ಶಿಕ್ಷಕರು ಮಕ್ಕಳಿಗೆ ಸೂಚನೆಗಳನ್ನು ನೀಡುವರು. |
| | 30ನಿ | | | | ಹಿರೇಮಣಿ | ಪಠ್ಯ ಪುಸ್ತಕದಲ್ಲಿರುವ ಒತ್ತಕ್ಷರ ಪದಗಳನ್ನು ಗುರುತು ಮಾಡಿ ತಮ್ಮ ಅಭ್ಯಾಸ ಪುಸ್ತಕದಲ್ಲಿ ಬರೆಯುವರು.<br>ಮಕ್ಕಳು ಗುರುತು ಮಾಡಿರುವ ಪದಗಳನ್ನು ಪರಿಶೀಲಿಸುವರು. |
| | 10ನಿ | | ಸಂಯುಕ್ತಾಕ್ಷರ ಪದ ಮತ್ತು ವಾಕ್ಯಗಳನ್ನು ನಕಲು ಮಾಡುವುದು | ಉಕ್ತ ಲೇಖನ, ಒತ್ತಕ್ಷರ ಪದಗಳ ಪಟ್ಟಿ | ಶಿಕ್ಷಕರು | ಮಕ್ಕಳನ್ನು ಕಲಿಕೆಗೆ ಸಿದ್ದಗೊಳಿಸುವರು. |
| | 30ನಿ | | | | ಶಿಕ್ಷಕರು | ಮಕ್ಕಳಿಂದ ಪಾಠವನ್ನು ಓದಿಸುವರು, ಒತ್ತಕ್ಷರಗಳ ನಿರ್ಗಳ ಉಚ್ಛಾರಣೆಯನ್ನು ಅಭ್ಯಾಸ ಮಾಡಿಸುವರು.<br>ಹಿಂದುಳಿದ ಮಕ್ಕಳಿಗೆ ವಿಶೇಷ ಅಭ್ಯಾಸ ಮಾಡಿಸುವರು. |
| 3ನೇ ಅವಧಿ | 30ನಿ | ಗಣಿತ – ಸಂಕಲನ | ಮೊತ್ತ 99 ಕ್ಕೆ ಮೀರದಂತೆ ಎರಡು ಅಥವಾ ಮೂರು ಸಂಖ್ಯೆಗಳ ಸಂಕಲನ ಮಾಡುವರು. | ಅಭ್ಯಾಸ ಪುಸ್ತಕ | ಶಿಕ್ಷಕರು | **ಪೂ.ಸಿ.ಚ. :**<br>1ನೇ ತರಗತಿಯವರೊಂದಿಗೆ ಹಾಡುವರು<br>ಶಿಕ್ಷಕರು ಮಕ್ಕಳಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳಲು ಸೂಚನೆಗಳನ್ನು ನೀಡುವರು. |
| | 10ನಿ | | | | ಹಿರೇಮಣಿ | ಶಿಕ್ಷಕರು ಮಕ್ಕಳನ್ನು ಗುಂಪುಗಳಲ್ಲಿ ಕೂಡಿಸಿ ಅಭ್ಯಾಸ ಪುಸ್ತಕದ ಪುಟ ಸಂಖ್ಯೆ 75 ರ ಲೆಕ್ಕಗಳನ್ನು ಮಾಡಲು ಸೂಚಿಸುವರು. |
| | 10ನಿ | ಪರಿಸರ ಅಧ್ಯಯನ – ನಮ್ಮ ಸುತ್ತಮುತ್ತ | ಮನುಷ್ಯ ಮತ್ತು ಪರಿಸರದ ಪರಸರ ಸಂಬಂಧಗಳನ್ನು ಅರಿಯುವರು.ಸ್ಥಳೀಯ ಪರಿಸರಗಳ ಬಗ್ಗೆ ಮಾಹಿತಿ ಪಡೆಯುವರು. | ಪ್ರಶ್ನೆಗಳ ಕಾರ್ಡ್ | ಶಿಕ್ಷಕರು | ಮಕ್ಕಳು ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳಲು ಸಿದ್ದರಾಗುವರು. |
| | 30ನಿ | | | | ಶಿಕ್ಷಕರು | ಕಾಡಿನ ಬಗ್ಗೆ ಸರಳ ಪ್ರಶ್ನೆಗಳನ್ನು ಕೇಳುವರು.<br>1. ನೀನು ಕಾಡನ್ನು ನೋಡಿರುವೆಯಾ ?<br>2. ಕಾಡಿನಲ್ಲಿರುವ ಪ್ರಾಣಿಗಳ ಹೆಸರನ್ನು ಹೇಳಿ ?<br>3. "ಆನೆಯ ಆಹಾರವೇನು ?<br>4. ಆನೆಯ ಕಾಲುಗಳು ಹೇಗಿವೆ ? |

## ಐದನೇ ತರಗತಿ

| ಅವಧಿ (1) | ಸಮಯ ಪಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (13) | ಸಾಮರ್ಥ್ಯದ ವಿವರ (14) | ಬಳಸ ಬಹುದಾದ ಕಲಿಕಾ ಸಾಮಗ್ರಿ (15) | ನಿರ್ವಹಣೆ (16) | ಕಲಿಕಾ ಪ್ರಕ್ರಿಯೆ (17) |
|---|---|---|---|---|---|---|
| 1ನೇ ಅವಧಿ | 40ನಿ | | | | | **– ಸಾಮೂಹಿಕ ಕವಾಯತು –** |
| 2ನೇ ಅವಧಿ | 10ನಿ | | | | | **– 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. –** |
| | 30ನಿ | | | | | |
| | 10ನಿ | | | | | **– 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. –** |
| | 30ನಿ | | | | | |
| 3ನೇ ಅವಧಿ | 30ನಿ | ವಿಜ್ಞಾನ – ಪೃಥ್ವಿಯ ಭೂ ಸ್ವರೂಪಗಳು | ಭೂ ಸ್ವರೂಪಗಳ ಬಗ್ಗೆ ತಿಳಿಯುವರು | ತಂಡಗಳಲ್ಲಿ ಚಟುವಟಿಕೆ, ಅಭ್ಯಾಸ ಪುಸ್ತಕ | ಶಿಕ್ಷಕರು | ಶಿಕ್ಷಕರು ಸೂಚನೆಗಳನ್ನು ನೀಡುವರು. |
| | 10ನಿ | | | | ಹಿರೇಮಣಿ | ಶಿಕ್ಷಕರು ಮಕ್ಕಳನ್ನು ತಂಡಗಳಲ್ಲಿ ಕೂಡಿಸಿ ವಿವಿಧ ರೀತಿಯ ಶಿಲೆಗಳು ಉಂಟಾಗುವಿಕೆಯ ಬಗ್ಗೆ ಬರೆಯಲು ಸೂಚಿಸುವರು. |
| | 10ನಿ | ಸಮಾಜ – ವೇದಗಳ ಕಾಲ | ವೇದಗಳ ಬಗ್ಗೆ ಅರಿಯುವುದು. ಅಂದಿನ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ತಿಳಿಯುವುದು. | – | ಶಿಕ್ಷಕರು | ಮಕ್ಕಳಿಗೆ ಪ್ರಶ್ನೋತ್ತರ ಅಭ್ಯಾಸ ಮಾಡುವ ಸಲುವಾಗಿ ಮಕ್ಕಳನ್ನು ಗುಂಪುಗಳಾಗಿ ಮಾಡುವರು. |
| | 30ನಿ | | | | ಹಿರೇಮಣಿ | ಮಕ್ಕಳು ಗುಂಪುಗಳಲ್ಲಿ ಕುಳಿತುಕೊಳ್ಳುವರು, ಪಠ್ಯ ಪುಸ್ತಕವನ್ನು ಮೌನವಾಗಿ ವಾಚನ ಮಾಡುವರು. ಪ್ರಶ್ನೋತ್ತರಗಳನ್ನು ಮನನ ಮಾಡುವರು. |